# ಕರ್ನಾಟಕ ಸಂಘ ಮುಂಬಯಿ

## Karnataka Sangha Mumbai

(ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ)

(Regd. under the Societies Registration Act 1860 & Bombay Public Trust Act. 1950)

# 90ನೇ ವಾರ್ಷಿಕ ವರದಿ 2023–2024



# 90th Annual Report 2023 - 2024

## OUR AIMS & OBJECTS

a) To foster Kannada language, literature & Culture;

b) To promote fine arts;

c) To promote friendly relations and a spirit of Co-operation among the Kannada speaking residents of Brihan Mumbai and its environs and strive for their cultural, social and economic advancement;

d) To conduct classes, training camps, workshops, seminars, conferences, exhibition for fostering talent in language, literature, music, dance, drama and arts for the furtherance of the aims & objects mentioned in a) to c) above.

e) To patronize and undertake educational, both academic and technical and social welfare activities for the benefit of Kannadigas and to strive for their intellectual and general welfare.

f) To foster activities designed to promote understanding and cordial relations between Kannadigas, Maharashtrians and all other residents of Brihan Mumbai, belonging to any linguistic, religious and ethnic groups.

g) To medical aid to members and general public by establishing and running medical diagnostic centre, nursing homes, hospitals etc.

h) To promote activities designed to encourage Kannadiga youth and women in social welfare programmes, leadership training, sports, fine arts, literary, cultural and intellectual pursuits etc.

i) To disseminate information to its members & public on literature, culture, History & education.

j) To promote activities that will help national integration

k) To purchase, take on lease or in exchange or otherwise acquire, develop, any moveable or immovable property/properties which may be necessary for the purpose of, or uses, in connection with any of the objects of the Sangha, and sell, demise, lease, mortgage, encumber, grant in exchange, surrender or dispose of any such property

l) To invest its funds in Government securities, debentures and approved securities and also to sell endorse, transfer, negotiate, vary or otherwise deal in Government securities and other approved securities.

m) To Co-ordinate and Co-operate with other Kannada non-political organizations having objects similar to the Sangha.

n) To engage in any other lawful activities, which is conducive to the promotion of any or all of the objects of the Sangha, mentioned above.

# KARNATAKA SANGHA, MUMBAI

(Regd. under the Societies Registration Act. 1860 & Bombay Public Trsut Act 1950)

F.P. No. 262, C.S.M. Marg, Off. T.H. Kataria Marg, Matunga (W), **Mumbai - 400 016**

E-mail: ksanghamumbai@gmail.com

**website** : http://karnatakasanghamumbai.in

## NOTICE

The **90th (2023-2024) Annual General Body Meeting of the Karnataka Sangha** will be held at 3.30 p.m. on Saturday 29th, June 2024 at Mysore Association (1st Floor), 393, Bhau Daji Road, Matunga (East), Mumbai -400 019 to consider/transact the following Businesses :-

1. To confirm the minutes of proceedings of 89th Annual General Body Meeting held on 29th June 2023.
2. To Consider & adopt the Annual report of Managing Committee, Audited Statements of Accounts and report of the Auditors of Sangha for the year 2023-2024
3. To declare the result of election for Managing Committee for the year 2024-2027
4. To appoint Statutory Auditor for the year 2024-2025 & fix their remuneration.
5. To appoint Internal Auditor for the year 2024-2025 & fix their remuneration.
6. To appoint a panel of election officers for the year 2024-2025.
7. To appoint Honorary legal advisor for the year 2024-2025.
8. To consider and approve the Estimated Budget for the year 2024-2025.
9. To consider any other matter with the permission of the chair.

Mumbai
Date : 31-05-2024

By Order of the Managing Committee
Sd/-
**Omdas Kannangar**
*Hon. Secretary*

**PS :** 1. Any Member who desires to have additional information in connection with Annual Report and Audited Accounts, is requested to intimate the same to Hon. Secretary on or before 26.06.2024.

2. Annual Report for the year 2023-2024 is already uploaded in the Sangha's website and members are requested to go through the same. As decided in the AGM dated 30.07.2023, Sangha refrains from circulating the hard copies of the Reports.

3. Members desirous to have soft copy of Annual Report, may please send a request to Sangha's E-mail ID : ksanghamumbai@gmail.com

# ಕರ್ನಾಟಕ ಸಂಘ ಮುಂಬಯಿ

(Regd. under the Societies Registration Act. 1860 & Bombay Public Trsut Act 1950)
F.P. No. 262, C.S.M. Marg , Off. T.H. Kataria Marg, Matunga (W), **Mumbai - 400 016**
E-mail: ksanghamumbai@gmail.com
**website** : http://karnatakasanghamumbai.in

## ತಿಳುವಳಿಕೆ ಪತ್ರ

ಕರ್ನಾಟಕ ಸಂಘ ಮುಂಬಯಿ ಇದರ **90ನೇಯ (2023–2024) ವಾರ್ಷಿಕ ಮಹಾಸಭೆಯು** ದಿನಾಂಕ **ಜೂನ್ 29, ಶನಿವಾರ 2024ರಂದು** ಅಪರಾಹ್ನ 3.30 ಗಂಟೆಗೆ ಮೈಸೂರು ಅಸೋಸಿಯೇಷನ್ (1ನೇ ಮಹಡಿ), 393, ಭಾವು ದಾಜಿ ರಸ್ತೆ, ಮಾಟುಂಗ (ಪೂರ್ವ), ಮುಂಬೈ–400 019ನಲ್ಲಿ ಈ ಕೆಳಗಿನ ಕಾರ್ಯ ಸೂಚಿಯನ್ನು ಪರಿಗಣಿಸಲು ಜರಗಲಿದೆ:

1. 29 ಜೂನ್ 2023ರಂದು ನಡೆದ 89ನೆಯ ವಾರ್ಷಿಕ ಮಹಾಸಭೆಯ ನಡಾವಳಿಗಳ ಧೃಡೀಕರಣ.
2. 2023–2024 ಸಾಲಿನ ಕಾರ್ಯಕಾರಿ ಸಮಿತಿಯ ವಾರ್ಷಿಕ ವರದಿ ಮತ್ತು ವಾರ್ಷಿಕ ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಆಯ–ವ್ಯಯ ಹಾಗೂ ಆಸ್ತಿ ಹೊಣೆಯ ವಿವರಣಾತ್ಮಕ ವರದಿಯ ಮಂಡನೆ ಮತ್ತು ಧೃಡೀಕರಣ.
3. 2023–2027ರ ಸಾಲಿನ ಚುನಾವಣೆಯ ಫಲಿತಾಂಶದ ಘೋಷಣೆ.
4. 2024–2025 ಸಾಲಿಗೆ ವಾರ್ಷಿಕ ಲೆಕ್ಕ ಪರಿಶೋಧಕರ ನೇಮಕಾತಿ ಮತ್ತು ಅವರ ಸಂಭಾವನೆಯ ನಿಗದಿ.
5. 2024–2025 ಸಾಲಿಗೆ ಆಂತರಿಕ ಲೆಕ್ಕ ಪರಿಶೋಧಕರ ನೇಮಕಾತಿ ಮತ್ತು ಅವರ ಸಂಭಾವನೆಯ ನಿಗದಿ
6. 2024–2025 ಸಾಲಿಗೆ ಚುನಾವಣಾ ಅಧಿಕಾರಿಗಳ ನೇಮಕ.
7. 2024–2025 ಸಾಲಿಗೆ ಗೌರವ ಕಾನೂನು ಸಲಹೆಗಾರರ ನೇಮಕ.
8. 2024–2025 ಸಾಲಿಗೆ ಅಂದಾಜು ವಾರ್ಷಿಕ ಬಜೆಟ್‌ನ ಮಂಡನೆ ಮತ್ತು ಮಂಜೂರಾತಿ
9. ಅಧ್ಯಕ್ಷರ ಅನುಮತಿಯ ಮೇರೆಗೆ ಇನ್ನಿತರ ವಿಷಯಗಳು.

ಮುಂಬೈ
31.05.2024

ಕಾರ್ಯಕಾರಿ ಸಮಿತಿಯ ಆದೇಶದ ಮೇರೆಗೆ
**ಓಂದಾಸ್ ಕಣ್ಣಂಗಾರ್**
ಗೌ. ಕಾರ್ಯದರ್ಶಿ

**ವಿ.ಸೂ. :** 1. ವಾರ್ಷಿಕ ವರದಿ ಮತ್ತು ವಾರ್ಷಿಕ ಲೆಕ್ಕ ಪತ್ರಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಮಾಹಿತಿಯನ್ನು ಪಡೆಯಲು ಬಯಸುವ ಯಾವುದೇ ಸದಸ್ಯರು ಗೌರವ ಕಾರ್ಯದರ್ಶಿಯವರಿಗೆ ದಿನಾಂಕ 26.06.2024ರಂದು ಅಥವಾ ಮೊದಲು ಕಳುಹಿಸಬೇಕು.

2. 2023–2024ರ ಸಾಲಿನ ವಾರ್ಷಿಕ ವರದಿಯನ್ನು ಈಗಾಗಲೇ ಸಂಘದ ವೈಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ದಿನಾಂಕ 30–07–2023ರಂದು ಜರಗಿದ ವಾರ್ಷಿಕ ಮಹಾಸಭೆಯಲ್ಲಿ ನಿರ್ಧಾರವಾದಂತೆ ವಾರ್ಷಿಕ ವರದಿಯ ಮುದ್ರಿತ ಪ್ರತಿಯನ್ನು ಸದಸ್ಯರಿಗೆ ಕಳುಹಿಸಲಾಗುವುದಿಲ್ಲ ಸದಸ್ಯರು ಗಮನಿಸಬೇಕಾಗಿ ವಿನಂತಿ.

3. ಸಂಘದ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಯನ್ನು ಪಡೆಯಲಿಚ್ಛಿಸುವ ಸಂಘದ ಸದಸ್ಯರು ಸಂಘದ ಇ–ಮೇಲ್‌ಗೆ **ksanghamumbai@gmail.com** ತಮ್ಮ ವಿನಂತಿಯನ್ನು ಕಳುಹಿಸಬೇಕಾಗಿ ಕೋರಿಕೆ

# ಕರ್ನಾಟಕ ಸಂಘ ಮುಂಬಯಿ

## 90ನೆಯ ವಾರ್ಷಿಕ ವರದಿ

## 2023 - 2024

ಆತ್ಮೀಯ ಬಂಧುಗಳೇ,

ನಮ್ಮ ಸಂಘದ 90ನೆಯ ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ 2023–2024ರ ಆಯ–ವ್ಯಯ ಪಟ್ಟಿ ಹಾಗೂ ಆಸ್ತಿ ಮತ್ತು ಹೊಣೆಯ (Assets & Liabilities) ವಿವರಣಾತ್ಮಕ ವರದಿಯನ್ನು 90ನೆಯ ವಾರ್ಷಿಕ ಮಹಾಸಭೆಗೆ ಸಾದರ ಪಡಿಸುತ್ತಿದ್ದೇವೆ.

ಸಂಘದ ಸಂಘದ 89ನೆಯ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷರಾದ ಶ್ರೀ ಮನೋಹರ ಎಂ. ಕೋರಿಯವರ ಅಧ್ಯಕ್ಷತೆಯಲ್ಲಿ ಗುರುವಾರ ಜೂನ್ 29, 2023ರಂದು ಮೈಸೂರು ಅಸೋಸಿಯೇಶನ್‌ನ ಸಭಾಗ್ರಹದಲ್ಲಿ 05.00 ಗಂಟೆಗೆ ಜರಗಿತು. ಅಂದು 2022–2023ರ ಆರ್ಥಿಕ ವರ್ಷದ ವರದಿಯನ್ನು ಮತ್ತು ಲೆಕ್ಕ ಪತ್ರವನ್ನು ಮಂಡಿಸಲಾಗಿ ಅದನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

2023–2026ರ ಅವಧಿಗೆ ಸಂಘದ ಅಧ್ಯಕ್ಷ ಮತ್ತು ಕಾರ್ಯಕಾರಿ ಸಮಿತಿಗೆ ನಡೆದ ಚುನಾವಣೆಯ ಫಲಿತಾಂಶದ ಘೋಷಣೆಯನ್ನು ಚುನಾವಣಾ ಅಧಿಕಾರಿಗಳಲ್ಲಿ ಒಬ್ಬರಾದ ಶ್ರೀ ರಮೇಶ್ ಎಂ. ರಾವ್‌ರವರು ಮಾಡಿದರು. ಅಧ್ಯಕ್ಷರಾಗಿ ಡಾ. ಭರತ್ ಕುಮಾರ್ ಪೊಲಿಪು, ಕಾರ್ಯಕಾರಿ ಸಮಿತಿಯ ಸದಸ್ಯರುಗಳಾಗಿ ಶ್ರೀ ದಿನೇಶ್ ಕಾಮತ್, ಡಾ. ಈಶ್ವರ ಅಲೆವೂರು, ಶ್ರೀ ಮನೋಹರ ಎಂ ಕೋರಿ, ಶ್ರೀ ಎನ್. ಬಿ. ಸಾವಲ್ಸಂಗ್ ಮತ್ತು ಮಹಿಳಾ ಮೀಸಲಾತಿ ಸದಸ್ಯರಾಗಿ ಶ್ರೀಮತಿ ಮಾಲತಿ ಚಂದ್ರಕಾಂತ್‌ಯವರು ಅವಿರೋಧವಾಗಿ ಆಯ್ಕೆಯಾದರು.

.

### ಸಂಘದ ಸದಸ್ಯರ ಯಾದಿ

| | |
|---|---:|
| ಸದಸ್ಯ ಸಂಘ ಸಂಸ್ಥೆಗಳು | 07 |
| ಮಹಾಪೋಷಕರು | 45 |
| ಪೋಷಕರು | 37 |
| ಆಜೀವ ಸದಸ್ಯರು | 3401 |
| **ಒಟ್ಟು** | **3490** |

# ಕರ್ನಾಟಕ ಸಂಘದ 89ನೇ ವಾರ್ಷಿಕ ಮಹಾಸಭೆ

## ನೂತನ ಸಾಂಸ್ಕೃತಿಕ ಸಮುಚ್ಚಯ ಶೀಘ್ರ ಸಾಕಾರಗೊಳ್ಳುವುದೇ ನನ್ನ ಬದುಕಿನ ಪರಮ ಅಭಿಲಾಷೆಯಾಗಿದೆ – ಮನೋಹರ್ ಎಂ. ಕೋರಿ

ಕರ್ನಾಟಕ ಸಂಘದ ಮಹತ್ವಕಾಂಕ್ಷೆಯ ಯೋಜನೆ ಸಾಂಸ್ಕೃತಿಕ ಸಮುಚ್ಚಯದ ನೆಲಹಂತದ ಕಾಮಗಾರಿಯು ಈಗಾಗಲೇ ಪೂರ್ಣಗೊಂಡಿದೆ. ಅದಷ್ಟು ಶೀಘ್ರ ಈ ಯೋಜನೆಯನ್ನು ಪೂರೈಸುವ ಉದ್ದೇಶನಮ್ಮದಾಗಿದೆ. ಈ ಬೃಹತ್ ಯೋಜನೆಗೆ ಸ್ಪಂದಿಸಿರುವ ಮನಸ್ಸುಗಳನ್ನು ನೆನೆಯುತ್ತಾ, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರು ಮುಕ್ತ ಮನಸ್ಸಿನಿಂದ ಆರ್ಥಿಕ ಬೆಂಬಲ ನೀಡಿ ಸಹಕರಿಸಬೇಕೆಂದು ವಿನಂತಿಸುತ್ತಿದ್ದೇನೆ.

ಕರ್ನಾಟಕ ಸಂಘದ ಜೊತೆಗಿನ ನನ್ನ ಸಂಬಂಧ ಐದು ದಶಕಗಳದ್ದು. ಈ ಸಮಯದಲ್ಲಿ ಸಮಿತಿ ಸದಸ್ಯನಾಗಿ, ಉಪಾಧ್ಯಕ್ಷನಾಗಿ, ಮತ್ತು ನಾಲ್ಕು ಅವಧಿಗೆ ಅಧ್ಯಕ್ಷನಾಗಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದ ಆತ್ಮತೃಪ್ತಿ ನನ್ನದಾಗಿದೆ. ಈ ಸಂದರ್ಭದಲ್ಲಿ ನೀವು ನೀಡಿದ ಪ್ರೀತಿ, ಸಹಕಾರವನ್ನು ನಾನೆಂದೂ ಮರೆಯಲಾರೆ. ಸಾಂಸ್ಕೃತಿಕ ಸಮುಚ್ಚಯ ನಿರ್ಮಾಣದ ಗುರುತರವಾದ ಜವಾಬ್ದಾರಿಯನ್ನು ನಾನು ಅತ್ಯಂತ ಪ್ರೀತಿ, ಕಾಳಜಿ, ಸಂಯಮದಿಂದ ನಿರ್ವಹಿಸಲು




ಕರ್ನಾಟಕ ಸಂಘ ಮುಂಬಯಿಯ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಮುಂಬಯಿಯ ರಂಗತಜ್ಞ, ಸಂಘಟಕ ಡಾ. ಭರತ್ ಕುಮಾರ್ ಪೊಲಿಪು ಅವರನ್ನು ನಿರ್ಗಮನ ಅಧ್ಯಕ್ಷರಾದ ಎಂ.ಎಂ. ಕೋರಿ ಅವರು ಗೌರವಿಸಿದಾಗ

ಪ್ರಯತ್ನಿಸಿದ್ದೇನೆ. ಕೆಲವು ಸಂಕೀರ್ಣ ಸಂದರ್ಭದಲ್ಲಿ ಕೆಲಸ ನಿಲ್ಲಬಾರದು ಎಂದು ನನ್ನ ಕುಟುಂಬದ ಮೂಲಕ ಸಹಕರಿಸಿದ್ದೇನೆ.

ಇದೀಗ ನನ್ನ ಅಧ್ಯಕ್ಷ ಸ್ಥಾನದ ಅವಧಿ ಮುಕ್ತಾಯಗೊಳ್ಳುತ್ತಿದೆ. ಆದರೆ ನನ್ನ ಮತ್ತು ಸಂಘದ ನಿಕಟವಾದ ಸಂಬಂಧ ಮತ್ತು ಸಮಿತಿಯವರ ಒತ್ತಾಯದಿಂದ ನನ್ನನ್ನು ಮತ್ತೆ ಸಮಿತಿ ಸದಸ್ಯನಾಗಿ ಮುಂದುವರಿಯುವಂತೆ ಮಾಡಿದೆ. ಸಾಂಸ್ಕೃತಿಕ ಸಮುಚ್ಚಯ ಪೂರ್ಣ ರೂಪದಲ್ಲಿ ಸಕಾರಗೊಳ್ಳುವುದನ್ನು ಕಣ್ತುಂಬಿಕೊಳ್ಳುವುದೇ ನನ್ನ ಬದುಕಿನ ಪರಮ ಅಭಿಲಾಷೆಯಾಗಿದೆ. ಅದು ಬೇಗನೆ ಸಾಧ್ಯವಾಗುವುದು ಎಂಬ ಬಲವಾದ ನಂಬಿಕೆ ನನಗಿದೆ, ಎಂದು ಕರ್ನಾಟಕ ಸಂಘದ ಅಧ್ಯಕ್ಷರಾದ ಮನೋಹರ ಎಂ. ಕೋರಿಯವರು ಹೇಳಿದರು. ಅವರು ಮಾಟುಂಗಾ ಪೂರ್ವದ ಮೈಸೂರ್ ಅಸೋಸಿಯೇಷನ್‌ನಲ್ಲಿ ದಿನಾಂಕ ಜೂನ್ 29ರಂದು ಜರಗಿದ ಸಂಘದ 89ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿಮಾತನಾಡುತ್ತಿದ್ದರು. ಸಂಘದಲ್ಲಿ ಬಹುಕಾಲದಿಂದ ನನ್ನೊಂದಿಗಿದ್ದು ಒಳ್ಳೆಯ ಭಾಂದವ್ಯವನ್ನಿಟ್ಟುಕೊಂಡಿರುವ ಡಾ. ಭರತ್‌ಕುಮಾರ್ ಪೊಲಿಪು ಅವರು ಸಂಘದ ನೂತನ ಅಧ್ಯಕ್ಷರಾಗಿರುವುದು ನನಗೆ ತುಂಬಾ ಸಂತೋಷವಾಗಿದೆ. ಅವರಿಗೆ ಬೇಕಾದ ಎಲ್ಲಾ ಸಹಕಾರ ಮತ್ತು ಬೆಂಬಲವನ್ನು ನಾನು ನೀಡುತ್ತೇನೆ

ಎಂದು ಮನದಾಳದ ಅಭಿನಂದನೆಯನ್ನು ಸಲ್ಲಿಸಿದರು. ಹಾಗೂ ತನ್ನ ಕಾರ್ಯಾವಾದಿಯಲ್ಲಿ ಸಹಕರಿಸಿದ ಎಲ್ಲರ ಪ್ರೀತಿ ವಾತ್ಸಲ್ಯಕ್ಕೆ ವಿನೀತನಾಗಿ ನಮಿಸುತ್ತೇನೆ ಎಂದು ಭಾವನಾತ್ಮಕವಾಗಿ ಹೇಳಿದರು.

ಪ್ರಾರಂಭದಲ್ಲಿ ಸಂಘದ ಗೌ. ಕಾರ್ಯದರ್ಶಿ ವಿಶ್ವೇಶ್ವರ ಎನ್. ಮೇಟಿ ಸ್ವಾಗತಿಸಿ ಮಹಾಸಭೆಯ ಕಲಾಪವನ್ನು ವಾಚಿಸಿದರು.

2022 – 2023ರ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಗೌ. ಜತೆ ಕೋಶಾಧಿಕಾರಿ ಸದಾನಂದ ಅಮೀನ್ ಮಂಡಿಸಿದರು, ಅದನ್ನು ಕ್ರಮವಾಗಿ ಅಂಗೀಕರಿಸಲಾಯಿತು.

2023 – 2026ರ ಸಾಲಿಗೆ ಅವಿರೋಧವಾಗಿ ಚುನಾಯಿತರಾದ ಡಾ. ಭರತ್ ಕುಮಾರ್ ಪೊಲಿಪು, ಮನೋಹರ ಎಂ. ಕೋರಿ, ಡಾ. ಈಶ್ವರ ಅಲೆವೂರು, ದಿನೇಶ್ ಕಾಮತ್, ಎನ್. ಬಿ. ಸಾವಳ್ ಸಂಗ್, ಶ್ರೀಮತಿ ಮಾಲತಿ ಚಂದ್ರಕಾಂತ್‌ರವರ ಹೆಸರನ್ನು ಚುನಾವಣಾ ಅಧಿಕಾರಿಗಳಲ್ಲಿ ಒಬ್ಬರಾದ ರಮೇಶ್ ಎಂ. ರಾವ್‌ವರು ಪ್ರಕಟಿಸಿದರು.

2023 – 2024 ರ ಸಾಲಿಗೆ ವಾರ್ಷಿಕ ಲೆಕ್ಕ ಪರಿಶೋಧಕರನ್ನಾಗಿ ಮೆ. ಅಶ್ವಜಿತ್ ಅಸೋಸಿಯೇಟ್‌ರವರನ್ನು ಮತ್ತು ಆಂತರಿಕ ಲೆಕ್ಕಪರಿಶೋಧಕರನ್ನಾಗಿ ಮೆ. ರಾಜೇಶ್ ಶೇಟ್‌ವರನ್ನು ನೇಮಿಸಲಾಯಿತು.

2023 – 2024ರ ಸಾಲಿಗೆ ಚುನಾವಣಾ ಅಧಿಕಾರಿಗಳಾಗಿ ನಾರಾಯಣ ಜಿ. ಮೆಂಡನ್, ರಮೇಶ್ ಎಂ. ರಾವ್ ಮತ್ತು ಅನಂದ ಶೆಟ್ಟಿಯವರನ್ನು ನೇಮಿಸಲಾಯಿತು. ಗೌರವ ಕಾನೂನು ಸಲಹೆಗಾರರಾಗಿ ಎಂ. ಡಿ. ರಾವ್ ನೇಮಿಸಲ್ಪಟ್ಟರು.

ಇದೇ ಸಂದರ್ಭದಲ್ಲಿ ಸಂಘದ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಚುನಾಯಿತಾರಾದ ಹೆಸರಾಂತ ರಂಗತಜ್ಞ ಡಾ. ಭರತ್‌ಕುಮಾರ್ ಪೊಲಿಪು ಅವರನ್ನು ಅಧ್ಯಕ್ಷರಾದ ಮನೋಹರ ಎಂ. ಕೋರಿಯವರು ಪುಷ್ಪಗುಚ್ಛ ನೀಡಿ ಅಭಿನಂದಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಡಾ. ಭರತ್‌ಕುಮಾರ್ ಪೊಲಿಪುರವರು, ಸಂಘದ ಅಧ್ಯಕ್ಷನಾಗುವ ಅವಕಾಶಗಳು ಇದ್ದಾಗಲೂ, ಆ ಬಗ್ಗೆ ಎಂದೂ ಚಿಂತಿಸದೆ ಸಂಘಕ್ಕಾಗಿ ದುಡಿಯುವುದೇ ನನ್ನ ಮೊದಲ ಆದ್ಯತೆಯಾಗಿತ್ತು. ಹೊಸ ಪರಿಕಲ್ಪನೆಯ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯವು ಮನೋಹರ ಕೋರಿಯವರ ನೇತೃತ್ವದಲ್ಲಿ ಸಾಕಾರಗೊಳ್ಳುತ್ತದೆ ಎಂಬ ಭರವಸೆ ಮತ್ತು ಆಶಯ ನನ್ನದಾಗಿದ್ದು ಕನ್ನಡ ಮನಸ್ಸುಗಳು ಬೆಂಬಲ ನೀಡಿ ಸಹಕರಿಸಬೇಕೆಂದು ವಿನಂತಿಸಿದರು.

ಸಂಘದ ಗೌ. ಕೋಶಾಧಿಕಾರಿ ಓಂದಾಸ್ ಕಣ್ಣಂಗಾರ್ ಮಾತನಾಡುತ್ತಾ, ಕನ್ನಡಿಗರ ಪ್ರೀತಿ, ಅಭಿಮಾನದಿಂದ ಒಂಬತ್ತು ದಶಕಗಳನ್ನು ಪೂರೈಸಿರುವ ಸಂಘವು ಲಕ್ಷಾಂತರ ಕಲಾವಿದರ ಬಾಳಿಗೆ ಬೆಳಕಾಗಿದೆ. ಸಂಘವು ತನ್ನ ಕಾರ್ಯಸಿದ್ಧಿಗೆ ತುಂಬಾ ಪ್ರಸಿದ್ಧಿಯಾಗಿದ್ದು ವಿಶಿಷ್ಟ ಸ್ಥಾನಮಾನವನ್ನು ಗಳಿಸಿದೆ. ಅದಕ್ಕೆ ಇತ್ತೀಚೆಗೆ ಅದ್ದೂರಿಯಾಗಿ ಜರಗಿದ ಸಂಘದ 90ರ ಸಂಭ್ರಮದ ಕಾರ್ಯಕ್ರಮವೇ ಸಾಕ್ಷಿಯಾಗಿದೆ. ಅದು ನಮಗೆ ಸದೃಢರಾಗಲು ಆತ್ಮ ವಿಶ್ವಾಸವನ್ನು ನೀಡಿದೆ.

ಸಂಘದ ನೂತನ ಸಾಂಸ್ಕೃತಿಕ ಕಟ್ಟಡದ ಪ್ರಮುಖವಾದ ನೆಲಹಂತದ ಕಾಮಗಾರಿ ಮುಗಿಸಿದ ನಿರಾಳತೆ ನಮ್ಮದಾಗಿದ್ದು, ಮುಂದಿನ ಕೆಲಸವನ್ನು ಅದಷ್ಟು ಬೇಗನೆ ಮುಗಿಸುವ ಪ್ರಯತ್ನ ನಮ್ಮದಾಗಿದೆ.

ಇಂದು ಮನೋಹರ ಕೋರಿಯವರ ಅಧ್ಯಕ್ಷತೆಯ ಅವಧಿ ಮುಗಿದಿದೆ. ಆದರೆ ಅವರು ಸಮಿತಿಯಲ್ಲಿದ್ದು, ನಮ್ಮ ಮಾರ್ಗದರ್ಶಕರಾಗಿ ನಮ್ಮನ್ನು ಮುನ್ನಡೆಸುತ್ತಾರೆ. ಹಲವಾರು ವರ್ಷಗಳಿಂದ ಮತ್ತು ಇತ್ತೀಚಿನ ಅತ್ಯಂತ ಕಠಿಣ ಸಂದರ್ಭದಲ್ಲೂ ಎದೆಗುಂದದೆ ಅವರು ತನ್ನ ಅಧ್ಯಕ್ಷ ಸ್ಥಾನದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಶ್ರೀಮಂತ ಮನೆತನದ ವ್ಯಕ್ತಿಯಾಗಿರುವ ಅವರು ಏಷ್ಟು ಸರಳತೆಯಿಂದ ಬದುಕಬಹುದು ಎಂಬುದಕ್ಕೆ ಒಂದು ಒಳ್ಳೆಯ ನಿದರ್ಶನವಾಗಿದ್ದಾರೆ. ಅವರೋರ್ವ ಮೆದುಮಾತಿನ ಸಹೃದಯಿಯಾಗಿ ಸಮಾಜ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾರೆ. ಕಳೆದ ನಾಲ್ಕು ದಶಕಗಳಿಗಿಂತಲೂ ಹೆಚ್ಚುಕಾಲದಿಂದ

ಕರ್ನಾಟಕ ಸಂಘದಲ್ಲಿ ಅವರು ಸಲ್ಲಿಸಿದ ಸೇವೆ ಅನುಪಮ ಹಾಗೂ ಅರ್ಥಪೂರ್ಣವಾಗಿದೆ. ಅದನ್ನು ಈ ಸಂದರ್ಭದಲ್ಲಿ ನೆನೆಯುವುದು ಔಚಿತ್ಯ ಪೂರ್ಣವೆಂದು ನನ್ನ ನಂಬಿಕೆಯಾಗಿದೆ. ಅವರಿಗೆ 2010ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಸಿಕ್ಕಿದ್ದು, ಅದು ಇಂದಿನ ಮಹಾನ್ ಕೆಲಸದಿಂದ ಸಾರ್ಥಕವಾಗಿದೆ. ಅವರ ನಿಸ್ವಾರ್ಥ ಸೇವೆಗೆ ಸಮಸ್ತ ಕನ್ನಡಿಗರ ಪರವಾಗಿ ಅಭಿನಂದನೆಗಳು ಸಲ್ಲುತ್ತದೆ.

ಡಾ. ಭರತ್ ಕುಮಾರ್ ಪೊಲಿಪು ಕರ್ನಾಟಕ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ಕನ್ನಡಿಗರಿಗೆ ಸಂತೋಷ ಮತ್ತು ಅಭಿಮಾನದ ಸಂಗತಿಯಾಗಿದೆ. ಇದು ಅವರ ದಶಕಗಳ ಕಾಲದ ಕನ್ನಡ ಪರ ಚಟುವಟಿಕೆಗಳಿಗೆ ಸಂದ ಗೌರವವಾಗಿದೆ. ಡಾ. ಭರತ್ ಕುಮಾರ್‌ರವರು ಧಿಡೀರನೆ ಅಧ್ಯಕ್ಷರಾಗಲಿಲ್ಲ. ಅವರಿಗೆ ಮೂರು ದಶಕಗಳಿಗಿಂತಲೂ ಹೆಚ್ಚು ಕಾಲ ಸಂಘದ ಬೇರೆಬೇರೆ ನೆಲೆಯಲ್ಲಿ ಕಾರ್ಯ ನಿರ್ವಹಿಸಿದ ಗಾಢ ಅನುಭವ ಇದೆ. ಈ ಸಂದರ್ಭದಲ್ಲಿ ಅವರಿಗೆ ಎಲ್ಲಾ ರೀತಿಯ ಯಶಸ್ಸು ಸಿಗಲಿ ಎಂದು ಶುಭವನ್ನು ಕೋರುತ್ತೇವೆ.

ಇದೇ ಸಂದರ್ಭದಲ್ಲಿ ಸಂಘದ ಸದಸ್ಯರಾದ ನಾರಾಯಣ ರಾವ್‌ವರು ಮಾತಾಡಿ ಕನ್ನಡಿಗರಾದ ನಾವೆಲ್ಲ ಸಾವಿರಾರು ಮೈಲು ದೂರದಿಂದ ಬಂದು ನೆಲೆ ನಿಂತಿದ್ದೇವೆ. ಭಾಷೆ ಸಂಸ್ಕೃತಿಯ ಮೇಲೆ ಪ್ರೀತಿ ಇರುವ ಕನ್ನಡಿಗರೆಲ್ಲಾ ಸೇರಿ ಸಹಾಯ ಮಾಡಬೇಕು. ಇದೊಂದು ಪುಣ್ಯದ ಕೆಲಸವಾದ್ದರಿಂದ ಇದಕ್ಕೆ ಎಲ್ಲರಿಂದಲೂ ಸಹಾಯ ಆಗಬೇಕು. ಎಲ್ಲರೂ ಒಮ್ಮತದಿಂದ ಸಾಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮುಂಬಯಿ ಕನ್ನಡ ಸಂಘದ ಅಧ್ಯಕ್ಷರಾದ ಜಿ. ಎಸ್. ನಾಯಕ್‌ರವರು, ಸಂಘದ ಸದಸ್ಯರೆಲ್ಲರೂ ಸೇರಿ ಅದಷ್ಟು ತಮ್ಮಿಂದಾದ ದೇಣಿಗೆ ನೀಡಬೇಕು. ನಾನು ಕೂಡ ನನ್ನ ಪಾಲಿನ ಕಿರು ಕಾಣಿಕೆಯನ್ನು ನೀಡಲು ಇಚ್ಛಿಸುತ್ತೇನೆ, ಎಂದರು.

ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ, ರಂಗ ಹಾಗೂ ಕಂಠದಾನ ಕಲಾವಿದ ಮೋಹನ್ ಮಾರ್ನಾಡ್ ಮಾತನಾಡುತ್ತಾ, ಮನೋಹರ ಕೋರಿ ಅವರು ದೊಡ್ಡಣ್ಣನ ಸ್ಥಾನದಲ್ಲಿದ್ದು ತನ್ನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಪ್ರೀತಿ, ಧ್ಯೇಯ, ಬದ್ಧತೆ, ಪ್ರಾಮಾಣಿಕತೆ ಇದ್ದರೆ ಯಾವುದೇ ಕೆಲಸವನ್ನಾದರೂ ಅದು ಮಾಡಿಸುತ್ತದೆ ಎಂದು ಶುಭ ಹಾರೈಸಿದರು.

ನ್ಯಾಯವಾದಿ ರಾಘವ ಎಂ. ರವರು ಮಾತನಾಡುತ್ತಾ ಸ್ವಾರ್ಥವಿಲ್ಲದೆ ಏನಾದರೂ ಮಾಡಲಿಕ್ಕೆ ಹೋದರೆ ಸ್ವಲ್ಪ ಕಷ್ಟವಾದರೂ ಖಂಡಿತಾ ನೆರವೇರುತ್ತದೆ. ಹೃದಯವಂತ ಕನ್ನಡಿಗರು ಪ್ರೀತಿಯಿಂದ ಕಟ್ಟಡದ ಕೆಲಸಕ್ಕೆ ಸಹಾಯ ಮಾಡುವ ಮನಸ್ಸು ಮಾಡಬೇಕು. ಆವಾಗ ಇಂತಹ ಕೆಲಸಗಳು ಇನ್ನಷ್ಟು ಸಾಂಗವಾಗಿ ನಡೆಯುತ್ತದೆ ಎಂದರು.

ನಾನೋರ್ವ ಕನ್ನಡ ಪ್ರೇಮಿಯಾಗಿದ್ದು ಕಳೆದ ನಾಲ್ಕು ದಶಕಗಳಿಂದ ತನ್ನಿಂದಾದ ಕನ್ನಡ ಸೇವೆ ಸಲ್ಲಿಸುತ್ತಿದ್ದೇನೆ ಎಂದು ಎನ್. ಆರ್. ರಾವ್ ಹೇಳಿದರು.

ಸಾಹಿತಿ, ಅಕ್ಷಯ ಮಾಸ ಪತ್ರಿಕೆಯ ಸಂಪಾದಕ ಹರೀಶ್ ಹೆಜ್ಮಾಡಿ ಮಾತನಾಡುತ್ತಾ ಕನ್ನಡಿಗರ ಪ್ರತಿಷ್ಠಿತ ಸಂಸ್ಥೆಯಾದ ಕರ್ನಾಟಕ ಸಂಘದ ನೂತನ ಅಧ್ಯಕ್ಷರಾದ ಡಾ. ಭರತ್‌ಕುಮಾರ್ ಪೊಲಿಪು ಅವರಿಗೆ ಅಭಿನಂದನೆಗಳು. ಮಿತ ಭಾಷಿ ಕೋರಿಯವರ ಕನ್ನಡ ಸೇವೆ ಎಲ್ಲರಿಗೂ ಮಾದರಿಯಾದುದು. ಅವರ ಸಾರಥ್ಯದ ಆನೆ ಬಲದಿಂದ ಕಟ್ಟಡದ ಕೆಲಸ ನೆರವೇರಬೇಕು. ಅವರಂತಹ ನಿಷ್ಕಲ್ಮಶ ಮನಸ್ಸಿನ ವ್ಯಕ್ತಿಗಾಗಿ ಯಾದರೂ ನೂತನ ಕಟ್ಟಡ ಎದ್ದು ನಿಲ್ಲಬೇಕು. ಸಮಿತಿಯಲ್ಲಿ ಒಳ್ಳೆಯ ಕೆಲಸ ಮಾಡುವ ತಂಡವಿದ್ದು ಖಂಡಿತಾ ಈ ಕೆಲಸ ನೆರವೇರುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಸಂಘದ ಅಧ್ಯಕ್ಷ ಎಂ. ಎಂ. ಕೋರಿ, ಗೌ. ಕಾರ್ಯದರ್ಶಿ ವಿಶ್ವೇಶ್ವರ ಎನ್. ಮೇಟಿ, ಗೌ. ಕೋಶಾಧಿಕಾರಿ ಓಂದಾಸ್ ಕಣ್ಣಂಗಾರ್, ಜತೆ ಕೋಶಾಧಿಕಾರಿ ಸದಾನಂದ ಅಮೀನ್ ಉಪಸ್ಥಿತರಿದ್ದರು.

ಕೊನೆಗೆ ಗೌ. ಕೋಶಾಧಿಕಾರಿ ಓಂದಾಸ್ ಕಣ್ಣಂಗಾರ್ ಕರ್ನಾಟಕ ಸಂಘಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕಾರ ನೀಡಿದ ಸಂಘ ಸಂಸ್ಥೆಗಳಿಗೆ, ಕಟ್ಟಡ ನಿಧಿಗೆ ದೇಣಿಗೆ ನೀಡಿದ ಎಲ್ಲಾ ದಾನಿಗಳಿಗೆ ಹಾಗೂ ನೆರೆದಿರುವ ಸದಸ್ಯರಿಗೆ ಧನ್ಯವಾದ ಸಲ್ಲಿಸಿದರು.

## 2023–2024ರ ವರ್ಷದಲ್ಲಿ ಜರಗಿದ ಕಾರ್ಯಕ್ರಮಗಳ ವರದಿ

## ಕರ್ನಾಟಕ ಸಂಘ ಮುಂಬಯಿ ಇದರ 90ರ ಸಂಭ್ರಮಕ್ಕೆ ಚಾಲನೆ

# ಕನ್ನಡಿಗರ ಆಸ್ಮಿತೆಯ ಕರ್ನಾಟಕ ಸಂಘದ ಸಭಾಗೃಹ ಪೂರ್ಣಗೊಳ್ಳಲು ಒಂದಾಗಿ ಶ್ರಮಿಸೋಣ – ಡಾ. ಸಿ. ಸೋಮಶೇಖರ್

ಮಹಾರಾಷ್ಟ್ರದ ಮುಂಬಯಿ ನಗರದಲ್ಲಿ ಕರ್ನಾಟಕ ಸಂಘದ ಮೂಲಕ ನಾಡಿನ ಸಾಂಸ್ಕೃತಿಕ ವೈಭವವನ್ನು ಕನ್ನಡಿಗರು ಇಲ್ಲಿ ಮೇಳೈಸುತ್ತಿದ್ದಾರೆ. ಸಾಹಿತಿಗಳನ್ನು, ಕಲಾವಿದರನ್ನು ಬೆಳೆಸುವಲ್ಲಿ ಸಂಘ 90 ವರ್ಷಗಳಿಂದ ಮಾಡುತ್ತಿರುವ ಸೇವೆ ನಿಜಕ್ಕೂ ಅಭಿನಂದನೀಯ. ಈ ಸಂಭ್ರಮಕ್ಕೆ ಮಹಾನ್



ವೈ.ವಿ.ಶೆಟ್ಟಿ ಅವರನ್ನು ಗೌರವಿಸಿದಾಗ



ಶ್ರೀನಿವಾಸ್ [illegible] ಅವರನ್ನು ಗೌರವಿಸಿದಾಗ

ಸಾಧಕರನ್ನು ವೇದಿಕೆಯಲ್ಲಿ ಬರಮಾಡಿಸಿದ್ದಾರೆ. ಇದು ಸಂಘದ ಸೇವಾ ಕಾರ್ಯಕ್ಕೆ ಸ್ಫೂರ್ತಿ ತುಂಬಿದೆ. ಯುವ ಜನಾಂಗಕ್ಕೆ ಇಂತಹ ಸಾಧಕರನ್ನು ಗುರುತಿಸುವ ಅಗತ್ಯವಿದೆ. ಕನ್ನಡದ ದೀಪವನ್ನು ಈ ನಗರದಲ್ಲಿ ಬಹಳಷ್ಟು ಕನ್ನಡ ಸಂಘ – ಸಂಸ್ಥೆಗಳು ಹಚ್ಚುತ್ತಿವೆ. ಕನ್ನಡಿಗರಲ್ಲಿ ಪ್ರೀತಿಯ ಭಾವೈಕ್ಯತೆ ಬೆಳೆಸಿದೆ. ಕನ್ನಡಿಗರು ಎಲ್ಲಿದ್ದರೂ ಕೂಡ ಅಪ್ಪಟ ಕನ್ನಡಿಗರಾಗಿದ್ದೀರಿ, ಹೃದಯವಂತರಾಗಿದ್ದೀರಿ. ಇದು ನಮ್ಮವರಲ್ಲಿ ಸದಾಕಾಲ ಇರಲಿ ಎಂದು ಇಷ್ಟ ಪಡುತ್ತೇನೆ. ಕನ್ನಡವೆಂದರೆ ಸಂಸ್ಕೃತಿ, ಅದೊಂದು ವಿಚಾರಧಾರೆಯಾಗಿದೆ. ಭಾವೈಕ್ಯತೆಯೊಂದಿಗೆ ರಾಷ್ಟ್ರೀಯತೆಯ ಪ್ರಜ್ಞೆಯನ್ನು ಮೂಡಿಸುವುದು ಕನ್ನಡ ಭಾಷೆಯಾಗಿದೆ. ನಮ್ಮ ಮಕ್ಕಳಿಗೆ ಜಾನಪದ ಸಾಹಿತ್ಯವನ್ನು, ಕಲಾ ಪ್ರಕಾರಗಳನ್ನು ಹೇಗೆ ಕೊಡಬೇಕು ಎನ್ನುವುದನ್ನು ಅತ್ಯಂತ ಸರಳವಾದ ಭಾಷೆಯಲ್ಲಿ ನೀಡುತ್ತಾ ಬಂದವರು ನಮ್ಮ ಹಿರಿಯರು. ಕನ್ನಡಿಗರದು ಸಾಮರಸ್ಯದ ಬದುಕು, ಸಂಘರ್ಷದ ಬದುಕು. ಶತಮಾನೋತ್ಸವದ ಸಂಭ್ರಮದಲ್ಲಿ ಪಾಲ್ಗೊಳ್ಳುವ ಸೌಭಾಗ್ಯ ನಮಗೆಲ್ಲರಿಗೂ ದೊರೆಯಲಿ ಎಂದು ಕರ್ನಾಟಕ ಗಡಿ ಪ್ರದೇಶದ ಅಭಿವೃದ್ಧಿ



ಶ್ರೀನಿವಾಸ [illegible] ಅವರನ್ನು ಗೌರವಿಸಿದಾಗ



ಡಾ| ಸಿ. ಸೋಮಶೇಖರ್ ಐ. ಎ. ಎಸ್ ಅವರನ್ನು ಗೌರವಿಸಿದಾಗ



ಮಲ್ಲಿಕಾರ್ಜುನ ಉತ್ತುರೆ ಐ.ಆರ್.ಎಸ್ ಅವರನ್ನು ಗೌರವಿಸಿದಾಗ



ಡಾ.ಸುರೇಶ್ ರಾವ್ ಅವರನ್ನು ಗೌರವಿಸಿದಾಗ

ಪ್ರಾಧಿಕಾರದ ಅಧ್ಯಕ್ಷ ಡಾ। ಸಿ. ಸೋಮಶೇಖರ್ ಐ.ಎ.ಎಸ್. (ನಿವೃತ್ತ) ನುಡಿದರು.

ಅವರು ಕರ್ನಾಟಕ ಸಂಘ ಇದರ 90ರ ಸಂಭ್ರಮದ ಆಚರಣೆಯನ್ನು ಎ. 8ರಂದು ಮಧ್ಯಾಹ್ನ ಮುಲುಂಡ್ ಕಾಳಿದಾಸ್ ಸಭಾಗ್ರಹದಲ್ಲಿ ಸಂಸ್ಕೃತಿ ಸಂಭ್ರಮ–ಸಮೂಹ ನೃತ್ಯ ಸ್ಪರ್ಧೆ, ಜಾನಪದ ಗಾಯನ – ವಾದನ, ಸನ್ಮಾನ ಹಾಗೂ ಉದ್ಘಾಟನಾ ಕಾರ್ಯಕ್ರಮವನ್ನು ನೆರವೇರಿಸಿ ಮಾತನಾಡಿದರು.

ಹೊರನಾಡಿನಲ್ಲಿ ಸದಾ ಕಾಲ ಜಾಗ್ರತವಾಗಿರುವಂತಹ ಬಹುದೊಡ್ಡ ಜವಾಬ್ದಾರಿಯನ್ನು ಕರ್ನಾಟಕ ಸಂಘ ಸುಮಾರು 9 ದಶಕಗಳಿಂದ ಕಾರ್ಯ ನಿರ್ವಹಿಸುತ್ತಿರುವ, ಈ ನಗರದ ಕರ್ನಾಟಕ ಸಂಘಗಳಿಗೆ ಒಂದು ಕಳಶಪ್ರಾಯ ವಾದಂತಹ ಸಂಘವಾಗಿರುವಂತದ್ದು ಬಹಳ ಸಂತೋಷದ ವಿಷಯ. ಸುದೀರ್ಘ ಕಾಲದಿಂದ ಸೇವೆ ಸಲ್ಲಿಸಿದ ಮತ್ತು ಸೇವೆ ಸಲ್ಲಿಸುತ್ತಿರುವ ಈ ಸಂಘದ ಹಿರಿಯ ಕನ್ನಡದ ಮಹಾನ್ ಕನ್ನಡ ಚೇತನಗಳಿಗೆ ನನ್ನ ಅನಂತ ಸಾಷ್ಟಾಂಗ ಪ್ರಣಾಮಗಳು ಎಂದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಮಲ್ಲಿಕಾರ್ಜುನ ಉತ್ತುರೆ ಐ. ಆರ್. ಎಸ್. (ಆಯುಕ್ತರು, ಆದಾಯ ತೆರಿಗೆ ಇಲಾಖೆ, ಪುಣೆ) ಮಾತನಾಡುತ್ತಾ, “ಭಾಷೆ ಒಂದು ಮಾಧ್ಯಮವಾಗಿದೆ, ಕನ್ನಡ ಎಂದರೆ ಸಂಸ್ಕೃತಿಯು ಹೌದು, ಒಂದು ಪರಂಪರ ಕೂಡ. ಕನ್ನಡದ ಭಾಷೆಯಾಗಿ, ಕನ್ನಡದ ಜನರಿಗಾಗಿ ಕರ್ನಾಟಕ ಸಂಘ 9 ದಶಕಗಳ ಕಾಲ ಮಾಡಿರೋದು ಸಾಮಾನ್ಯ ಸೇವೆಯಲ್ಲ. ಇದು ಮಹಾರಾಷ್ಟ್ರದ ಜನರಿಗೆ ಕೂಡ ಗೌರವವಾಗಿದೆ. ಈ ನಗರದಲ್ಲಿರುವ ಕನ್ನಡಿಗರು ಬಹುಕೋಟಿ ವೆಚ್ಚದ ಸಂಕೀರ್ಣ ಪೂರ್ಣಗೊಳ್ಳುವಲ್ಲಿ ಸಹಕಾರವನ್ನು ನೀಡಬೇಕು, ನನ್ನಿಂದ ಕೂಡ ಇದಕ್ಕೆ ಸಹಕಾರವಿದೆ ಎಂದು ನುಡಿದರು.

ಮತ್ತೋರ್ವ ಅತಿಥಿ ಶ್ರೀನಿವಾಸ ಸಿರಿಗೆರೆ (ಆಡಳಿತ ನಿರ್ದೇಶಕರು ಶಕ್ತಿ ಇಂಟರ್‌ನ್ಯಾಶನಲ್ ಪ್ರೈ. ಲಿ.) ಮಾತನಾಡುತ್ತಾ ನಮ್ಮ ಪ್ರಾಮಾಣಿಕತೆ ನಿಷ್ಠೆಯ ಸೇವಾ ಕಾರ್ಯಕ್ಕೆ ನಮ್ಮನ್ನು ರಕ್ಷಿಸುವ ದೇವರು ಕೂಡ ಬೆಂಬಲಿಸುತ್ತಾರೆ. ಈ ಮಹಾನಗರದಲ್ಲಿ ಬೃಹತ್ ಯೋಜನೆಯನ್ನು ಕರ್ನಾಟಕ ಸಂಘ ರೂಪಿಸಿದೆ. ಅವರ ಜೊತೆಗೆ ನಾವೆಲ್ಲರೂ ಕೈ ಜೋಡಿಸಬೇಕಾಗಿದೆ. ಆ ಮೂಲಕ ಕನ್ನಡ ಭಾಷೆ–ಸಂಸ್ಕೃತಿ–ಸಂಸ್ಕಾರಗಳು ಹೊಸ ಸಂಕಿರಣದಲ್ಲಿ ಇನ್ನು ಎತ್ತರಕ್ಕೆ ಬೆಳೆಯಲು ಸಾಧ್ಯವಾಗುತ್ತದೆ ಎಂದರು.

ಮುಖ್ಯ ಅತಿಥಿ ವೈ. ಎಂ. ಶೆಟ್ಟಿ (ಆಡಳಿತ ನಿರ್ದೇಶಕರು, ಡೈಕಮ್ ಪ್ರಾಡಕ್ಟ್ ಪ್ರೈ.ಲಿ.) ಮಾತನಾಡುತ್ತಾ ಕನ್ನಡದಲ್ಲಿ ಶಿಕ್ಷಣ ಪಡೆದ ನಮ್ಮವರ ಸಾಧನೆಗಳು ಸಾಮಾನ್ಯವಲ್ಲ. ಈ ನಗರದಲ್ಲಿ ಕನ್ನಡಿಗರು ಬಹಳಷ್ಟು ಅಸಮಾನ್ಯ ಸಾಧನೆಯನ್ನು ಮಾಡಿದ್ದಾರೆ. ಕರ್ನಾಟಕ ಸಂಘ ಭವ್ಯ

ಸಂಕಿರಣವನ್ನು ಮಾಡುವ ಯೋಚನೆಯನ್ನು ಸಿದ್ಧಪಡಿಸಿ ಅದನ್ನು ಶೀಘ್ರ ಗತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದು ನಮ್ಮ ಕನ್ನಡಿಗರಿಗೆ ಗೌರವ ಮತ್ತು ಹೆಮ್ಮೆಯಾಗಿದೆ ಎಂದರು.

ಗೌರವ ಅತಿಥಿಯಾಗಿ ಶ್ರೀನಿವಾಸ ಸಾಫಲ್ಯ (ಅಧ್ಯಕ್ಷರು, ಸಾಫಲ್ಯ ಸೇವಾ ಸಂಘ, ಮುಂಬಯಿ) ಅವರು ಮಾತನಾಡಿ, "ಕನ್ನಡಿಗರ ಹಿರಿಮೆ–ಗರಿಮೆ ಈ ಸಂಘದಲ್ಲಿ ಅಡಕವಾಗಿದೆ. 150 ವರ್ಷಗಳ ಹಿಂದೆ ನಮ್ಮ ತುಳು–ಕನ್ನಡಿಗರು ಈ ನಗರಕ್ಕೆ ಬಂದವರು. ಬರುವಾಗ ನಮ್ಮ ನಾಡಿನ ಕಂಪನ್ನು ಅಲ್ಲಿಯ ಆಚಾರ–ವಿಚಾರಗಳನ್ನು ಹಾಗೂ ಸಂಸ್ಕೃತಿಯನ್ನು ತಂದರು. ಇಲ್ಲಿನ ಸಂಘರ್ಷದ ಬದುಕಿನೊಂದಿಗೆ ಜೀವನವನ್ನು ಕಟ್ಟಿದವರು. ಕರ್ನಾಟಕದ ಸಂಸ್ಕೃತಿಯನ್ನು ಉಳಿಸಬೇಕೆನ್ನುವ ನಿಟ್ಟಿನಿಂದ ನಮ್ಮವರು ಈ ನಗರದಲ್ಲಿ ಸಂಘ–ಸಂಸ್ಥೆಗಳನ್ನು ಕಟ್ಟಿಕೊಂಡಿದ್ದಾರೆ. ಕನ್ನಡ ಸಂಘ–ಸಂಸ್ಥೆಗಳೊಂದಿಗೆ ಅವರ ಬದುಕಿಗೆ ಕೂಡ ಭದ್ರ ಬುನಾದಿಯನ್ನು ಹಾಕಿಕೊಂಡಿದ್ದಾರೆ. ಈಗ ಈ ನಗರದಲ್ಲಿ ಕನ್ನಡದ ವಿಶೇಷತೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದನ್ನು ಕಂಡಿದ್ದೇವೆ. 90 ವರ್ಷಗಳಿಂದ ಕರ್ನಾಟಕ ಸಂಘದ ವೇದಿಕೆಯಲ್ಲಿ ಬಹಳಷ್ಟು ವಿವಿಧ ರೀತಿಯ ಸೇವೆಗಳು ನಡೆದಿದೆ. ಅಂತಹ ಭವ್ಯ ಪರಂಪರೆಯನ್ನು ಹೊಂದಿದ ಈ ಸಂಘಕ್ಕೆ ಇದೀಗ ಭವ್ಯ ಸಂಕಿರಣನ್ನು ನಿರ್ಮಾಣ ಮಾಡುವುದಕ್ಕೆ ಕರ್ನಾಟಕ ಸರಕಾರ ಈ ಸಂಘದ ಯೋಜನೆಗೆ ಸಹಕಾರ ನೀಡಬೇಕು ಅಲ್ಲದೆ ನಮ್ಮೆಲ್ಲರ ಸಹಕಾರವೂ ಅತೀ ಅಗತ್ಯವೆಂದರು.

ಡಾ॥ ಸುರೇಶ್ ರಾವ್ (ಅಧ್ಯಕ್ಷರು, ಬಿ.ಎಸ್.ಕೆ.ಬಿ. ಅಸೋಸಿಯೇಶನ್) ಅವರು ಮಾತನಾಡುತ್ತಾ, ಕರ್ನಾಟಕ ಸಂಘದ ಈ ಕಟ್ಟಡ ಅದೊಂದು ದೇವಸ್ಥಾನದ ಹಾಗೆ. ಯಾಕೆಂದರೆ ಅಲ್ಲಿ ಜ್ಞಾನ, ಕರ್ಮ, ಭಕ್ತಿ, ಯೋಗ ಬೇಕು. ಅದೆಲ್ಲವನ್ನು ಈ ಸಂಘ ಮಾಡುತ್ತಾ ಬಂದಿದೆ. ಶಿಕ್ಷಣ, ಶಾಹಿತ್ಯ, ಸಾಮಾಜಿಕ ಸೇವೆ ಹೀಗೆ ಎಲ್ಲಾ ರೀತಿಯಲ್ಲೂ 9 ದಶಕಗಳ ಕಾಲ ಕನ್ನಡಿಗರನ್ನು ಈ ನಗರದಲ್ಲಿ ಒಗ್ಗಟ್ಟು ಮಾಡಿದೆ. ನಾವೆಲ್ಲರೂ ಈ ಬೃಹತ್ ಯೋಜನೆಗೆ ಸಹಕಾರ ನೀಡಬೇಕು ಎಂದು ತಿಳಿಸಿದರು.

ಸಂಘದ ಗೌರವ ಕೋಶಾಧಿಕಾರಿ ಓಂದಾಸ್ ಕಣ್ಣಂಗಾರ್ ಅವರು ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಡಾ. ಸಿ. ಸೋಮಶೇಖರ್ ಐ.ಎ.ಎಸ್ (ನಿ) ಗೈದರು. ಅಧ್ಯಕ್ಷತೆಯನ್ನು ಕರ್ನಾಟಕ ಸಂಘದ ಅಧ್ಯಕ್ಷರಾದ ಎಂ. ಎಂ. ಕೊರಿಯವರು ವಹಿಸಿದ್ದರು.

ಗೌರವ ಅತಿಥಿಗಳಾಗಿ ಮಲ್ಲಿಕಾರ್ಜುನ ಉತ್ತುರೆ ಐ. ಆರ್. ಎಸ್. (ಅಯುಕ್ತರು, ಆದಾಯ ತೆರಿಗೆ ಇಲಾಖೆ, ಪುಣೆ), ವೈ ಎಂ. ಶೆಟ್ಟಿ (ಆಡಳಿತ ನಿರ್ದೇಶಕರು ಡೈಕೆಮ್ ಪ್ರಾಡಕ್ಟ್ ಪ್ರೈ. ಲಿ.), ಶ್ರೀನಿವಾಸ ಸಿರಿಗೆರೆ (ಆಡಳಿತ ನಿರ್ದೇಶಕರು, ಶಕ್ತಿ ಇಂಟರ್‌ನ್ಯಾಶನಲ್ ಪ್ರೈ. ಲಿ.), ಶ್ರೀನಿವಾಸ ಸಾಫಲ್ಯ (ಅಧ್ಯಕ್ಷರು, ಸಾಫಲ್ಯ ಸೇವಾ ಸಂಘ, ಮುಂಬಯಿ), ಡಾ॥ ಸುರೇಶ್ ರಾವ್ (ಅಧ್ಯಕ್ಷರು, ಬಿಎಸ್.ಕೆ.ಬಿ. ಅಸೋಸಿಯೇಶನ್), ಕರ್ನಾಟಕ ಸಂಘ ಗೌರವ ಕಾರ್ಯದರ್ಶಿ ವಿಶ್ವೇಶ್ವರ್ ಎನ್. ಮೇಟಿ, ಖಜಾಂಚಿ ಓಂದಾಸ್ ಕಣ್ಣಂಗಾರ್, ಗಡಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತಿಹಳ್ಳಿ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದಂಗವಾಗಿ ಮುಂಬಯಿ ಕನ್ನಡಿಗರ ಕನ್ನಡ ಸಂಘ–ಸಂಸ್ಥೆಗಳಿಗಾಗಿ ಸಮೂಹ ನೃತ್ಯ ಸ್ಪರ್ಧೆ ಆಯೋಜಿಸುತ್ತಿದ್ದು, 15 ತಂಡಗಳು ಪಾಲ್ಗೊಂಡಿದ್ದು, ಅಂತಾರಾಷ್ಟ್ರೀಯ ಖ್ಯಾತಿಯ ಗಾಯಕಿ ಗಣೇಶ್ ಪ್ರಸಾದ್ ಮತ್ತು ತಂಡದವರಿಂದ 'ಸವಿತಕ್ಕನ ಆಳ್ವಿ

ಬ್ಯಾಂಡ್' ಜಾನಪದ ಗಾಯನ – ವಾದನ ಹಾಗೂ ವೈವಿಧ್ಯ ಕಾರ್ಯಕ್ರಮ ನಡೆದವು.

## "ಭಾರತೀಯ ಭಾವೈಕೆಯ ಸಾಂಸ್ಕೃತಿಕ ವೈಭವವನ್ನು ಮುಂಬಯಿಯಲ್ಲಿ ಬಿಂಬಿಸಿದ ಕರ್ನಾಟಕ ಸಂಘದ 90ರ ಸಂಭ್ರಮ – ಪ್ರವೀಣ್ ಶೆಟ್ಟಿ ವಕ್ವಾಡಿ ದುಬೈ

ಹೊರನಾಡಿನ ಕನ್ನಡಿಗರಿಗೆ ಕನ್ನಡದ ಭಾಷೆ ಸಂಸ್ಕೃತಿಯ ಬಗ್ಗೆ ಅಪಾರ ಅಭಿಮಾನವಿದ್ದು, ಅದು ಅವರನ್ನು ಜಾಗೃತಗೊಳಿಸಿ ವೈಶಿಷ್ಟ ಪೂರ್ಣಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಮಹತ್ವ ದಪಾತ್ರವನ್ನು ವಹಿಸುತ್ತದೆ. ಕನ್ನಡ ಭಾಷೆಯ ಉಳಿವಿಗಾಗಿ ನಿರಂತರವಾಗಿ ಕೆಲಸ ಕಾರ್ಯಗಳು ಮಹಾರಾಷ್ಟ್ರದಲ್ಲಿ ನಡೆಯುವಷ್ಟು ಕನ್ನಡದ ಸಾಂಸ್ಕೃತಿಕ ಕಾರ್ಯಕ್ರಮ ನಮ್ಮ ಕನ್ನಡನಾಡಿನಲ್ಲೂ ನಡೆಯುವುದಿಲ್ಲ. 90 ವರ್ಷಗಳಿಂದ ಕರ್ನಾಟಕ ಸಂಘ ಮಾಡುತ್ತಿರುವ ಕನ್ನಡ ಪರಕಾರ್ಯಗಳು ತುಂಬಾ ಪ್ರಸಿದ್ದಿಯನ್ನು ಪಡೆದಿದ್ದು, ಸರಕಾರವು ಇಂತಹ ಮೇರು ಸಂಸ್ಥೆಗಳತ್ತ ಗಮನಹರಿಸಬೇಕು. ನಮ್ಮನಾಡಿನ ಮೇಲೆ, ಭಾಷೆಯ ಮೇಲೆ ಅಭಿಮಾನ ಇದ್ದವರು ಮಾತ್ರ ಇಂಥ



ಕಾರ್ಯದಲ್ಲಿ ಪಾಲ್ಗೊಳ್ಳಲು ಸಾಧ್ಯ ಸಂಸ್ಕೃತಿ ಉಳಿದರೆ ಧರ್ಮವು ಉಳಿಯುವುದಕ್ಕೆ ಸಾಧ್ಯ.

ಕರ್ನಾಟಕದ ಸಾಂಸ್ಕೃತಿಕ ವೈಭವವನ್ನು ಮುಂಬೈಯಲ್ಲಿ ಮತ್ತೆ ಅದ್ಬುತವಾಗಿ ಮಾಡಬೇಕಾದರೆ ಕರ್ನಾಟಕ ಸಂಘದ ಭವ್ಯ ಭವನ ಎದ್ದು ನಿಲ್ಲಬೇಕಾಗಿದೆ. ಅಂತಹ ಜನ ಕಲ್ಯಾಣದ ಮಹಾಕಾರ್ಯಕ್ಕೆ ನಾವೆಲ್ಲರೂ ಒಳ್ಳೆ ಮನಸ್ಸಿನಿಂದ ಸಹಕಾರ ನೀಡಬೇಕಾಗಿದೆ ಎಂದು ಫಾರ್ಚೂನ್ ಗ್ರೂಫ್ ಆಫ್ ಹೋಟೆಲ್ಸ್‌ನ ಆಡಳಿತ ನಿರ್ದೇಶಕ. ಪ್ರವೀಣ್ ವಕ್ವಾಡಿ ದುಬೈ ನುಡಿದರು



ಕರ್ನಾಟಕ ಸಂಘದ 90ರ ಸಂಭ್ರಮದ ಆಚರಣೆಯ ಏಪ್ರಿಲ್ 8 ರಂದು ಮಧ್ಯಾಹ್ನ ಮುಲುಂಡ್ ಕಾಳಿದಾಸ್ ಸಭಾಗೃಹದಲ್ಲಿ ಸಂಸ್ಕೃತಿ ಸಂಭ್ರಮ– ಸಮೂಹ ನೃತ್ಯ ಸ್ಪರ್ಧೆ, ಜಾನಪದ ಗಾಯನ – ವಾದನ, ಸನ್ಮಾನ ಕಾರ್ಯಕ್ರಮದ ಸಮಾರೋಪದಲ್ಲಿ ಅವರು ಮಾತಾನಾಡಿದರು,



[illegible]

ಅಧ್ಯಕ್ಷತೆಯನ್ನು ಕರ್ನಾಟಕ ಸಂಘದ ಅಧ್ಯಕ್ಷರಾದ ಎಂ. ಎಂ. ಕೋರಿಯವರು ವಹಿಸಿದ್ದರು.

ಗೌರವ ಅತಿಥಿಗಳಾಗಿ ಪುಣೆ ಬಂಟರ ಸಂಘದ ಅಧ್ಯಕ್ಷ ಇನ್ನ ಕುರ್ಕಿಲಬೆಟ್ಟು ಸಂತೋಷ್ ಶೆಟ್ಟಿ ಮಾತನಾಡುತ್ತಾ ಕಳೆದ 90 ವರ್ಷಗಳಿಂದ ಬಹಳ ಅರ್ಥಪೂರ್ಣವಾಗಿ ನಾಡಿನ ಸಾಂಸ್ಕೃತಿಕ ವಿಚಾರ



[illegible]

ಧಾರೆಗಳನ್ನು ಮಾಡುತ್ತಿರುವ ಈ ಸಂಘದ ಎಲ್ಲಾ ಪದಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ, ಸಂಘ



[illegible]

## ಕನ್ನಡದ ಮನಸ್ಸುಗಳು ಮುಕ್ತ ಮನಸ್ಸಿನಿಂದ ಸ್ಪಂದಿಸಬೇಕು – ಓಂದಾಸ್ ಕಣ್ಣಂಗಾರ್

ಸಂಘದ ಗೌರವ ಕೋಶಾಧಿಕಾರಿ ಓಂದಾಸ್ ಕಣ್ಣಂಗಾರ್ ಪ್ರಸ್ತಾವಿಕವಾಗಿ ಮಾತನಾಡುತ್ತಾ, ಮುಂಬಯಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ, ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕರ್ನಾಟಕ ಸಂಘವು ತನ್ನ 90ರ ಸಂಭ್ರಮವನ್ನು ಆಚರಿಸುವಂತಾಗಲು ತುಂಬಾ ಜನ ಹಿರಿಯರ ಯೋಗದಾನವಿದೆ. ಆ ಎಲ್ಲಾ ಮಹನೀಯರನ್ನು ಈ ಸಂದರ್ಭದಲ್ಲಿ ಅತ್ಯಂತ



ವಿನೀತನಾಗಿ ನೆನಪಿಸುತ್ತಿದ್ದೇನೆ. ಸಂಘವು 90 ವರುಷಗಳಿಂದ ನಿರಂತರವಾಗಿ ಕನ್ನಡ ನಾಡು ನುಡಿ, ಕಲೆ, ಸಂಸ್ಕೃತಿ, ನೃತ್ಯ, ಸಂಗೀತ, ಸಾಹಿತ್ಯ, ನಾಟಕ, ಯಕ್ಷಗಾನ, ಶಿಕ್ಷಣ, ಆರೋಗ್ಯ ಮುಂತಾದವುಗಳ ಬಗ್ಗೆ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಕ್ರಿಯಾಶೀಲವಾಗಿದೆ. ಕೋಟ್ಯಾಂತರ ಜನರ ಮತ್ತು ಕಲಾವಿದರ ಒಡಲ ಪ್ರೀತಿಯನ್ನು ತನ್ನ ಮಡಿಲಲ್ಲಿಟ್ಟುಕೊಂಡು, ತಾನು ಬೆಳೆಯುದರೊಟ್ಟಿಗೆ ಕಲಾವಿದರನ್ನು ಬೆಳೆಸಿದ ಹಾಗೂ ಸಲುಹಿದ ಪ್ರೀತಿಗೆ ಪಾತ್ರವಾಗಿದೆ. ಸಂಘದ ವೇದಿಕೆಯು ಭಾರತರತ್ನ ಪಂಡಿತ್ ಭೀಮಸೇನ್ ಜೋಶಿ, ಪದ್ಮವಿಭೂಷಣ ಗಂಗೂಬಾಯಿ ಹಾನಗಲ್, ಮುಂತಾದ ಮೇರು ಕಲಾವಿದರ ಪಾದ ಸ್ಪರ್ಶದಿಂದ ಪಾವಿತ್ರ್ಯತೆಯನ್ನು ಹೊಂದಿದ್ದು, ತುಂಬಾ ಪ್ರತಿಷ್ಠೆಯನ್ನು ಪಡೆದಿದೆ. ಸಂಘವು ವಿಭಿನ್ನ ನೆಲೆಗಳಲ್ಲಿ ಮಾಡಿದ ಸಾಧನೆಯು ಗುರುತರವಾಗಿದ್ದು ಅಪಾರ ಜನ ಮನ್ನಣೆಯನ್ನು ಗಳಿಸಿದೆ.

ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯದಲ್ಲಿ ಕರ್ನಾಟಕ ಮತ್ತು ಭಾರತೀಯ ಕಲೆ, ಸಂಸ್ಕೃತಿಯನ್ನು ಬಿಂಬಿಸುವ ಹಲವಾರು ಯೋಜನೆಗಳು ಒಳಗೊಂಡಿದೆ. ಇದನ್ನು ಆದಷ್ಟು ಬೇಗ ಪೂರ್ಣಗೊಳಿಸುವ ನಿಟ್ಟಿನಲ್ಲಿ ಸಮಿತಿಯು ಕಾರ್ಯನಿರತವಾಗಿದ್ದು "ಕನ್ನಡದ ಮನಸ್ಸುಗಳು ಮುಕ್ತ ಮನಸ್ಸಿನಿಂದ ಸ್ಪಂದಿಸಬೇಕು" ಎಂದು ವಿನಂತಿಸಿಕೊಂಡರು.



ಕೆ. ಡಿ.ಶೆಟ್ಟಿ ಅವರನ್ನು ಗೌರವಿಸಿದಾಗ



[illegible] ಅವರನ್ನು ಗೌರವಿಸಿದಾಗ

ಕಟ್ಟುವುದು ಸುಲಭದ ಕೆಲಸ ಸಂಘವನ್ನು ಮುನ್ನಡೆಸುವುದು ಅದು ಕಷ್ಟದ ಕೆಲಸ. ಅದನ್ನು ಬಹಳ ಹತ್ತಿರದಿಂದ ನನ್ನ ಬದುಕಿನಲ್ಲಿ ಕಂಡಿದ್ದೇನೆ ಆದರೆ ಕರ್ನಾಟಕ ಸಂಘ ಸುದೀರ್ಘ ಕಾಲದಿಂದ ಸಾಹಿತಿಗಳಿಗೆ ಕಲಾವಿದರಿಗೆ ವಿದ್ಯಾರ್ಥಿಗಳಿಗೆ ವಿವಿಧ ರೀತಿಗಳ ಸಹಕಾರವನ್ನು ನೀಡುತ್ತಾ ಬಂದಿರುವುದು ಸಂತಸ ತಂದಿದೆ, ಸಂಘದ ಬೃಹತ್ಯೋಜನೆ ಇದು ನಮ್ಮ ನಿಮ್ಮೆಲ್ಲರ ಯೋಜನೆಯಾಗಿದೆ, ಕರ್ನಾಟಕದಿಂದ ಬಂದ ನಾವೆಲ್ಲರೂ ನಮ್ಮ ಸಂಸ್ಕೃತಿ ಸಂಸ್ಕಾರವನ್ನು ಮರೆತಿಲ್ಲ ಈ ಸಾಂಸ್ಕೃತಿಕ ಸಂಸ್ಕಾರದ ಪ್ರತೀಕವಾಗಿ ಈ ವೇದಿಕೆಯಲ್ಲಿ ನೃತ್ಯಉತ್ಸವವೇ ಸಾಕ್ಷಿಯಾಗಿದೆ, ನಮ್ಮೂರಿನ ಜನರಲ್ಲಿ ಬೇಡುವ ಕೈಗಳಿಗಿಂತ ನೀಡುವ ಕೈಗಳೇ ಹೆಚ್ಚು ಆದ್ದರಿಂದ ಪುಣೆ ನನಗರದಲ್ಲಿ ಬಹುಕೋಟಿ ಬಂಟರ ಭವನ ನನ್ನ ನಾಯಕತ್ವದಲ್ಲಿ ಸಮಸ್ತ ತುಳು ಕನ್ನಡಿಗರ ಸಹಕಾರದಿಂದ ನಿರ್ಮಾಣವಾಗಿದೆ, ಈ ಭವನ ಕರ್ನಾಟಕ ಭವನ ತುಳು ಭವನವಾಗಿದೆ ಜನರಿಗೆ ಉಪಯೋಗವಾಗುತಿದೆ, ಇದು ನಮ್ಮೂರಿಗೆ ಸಂದಗೌರವವಾಗಿದೆ, ಇಂದು ನನ್ನನ್ನು ಗೌರವಿಸಿದ್ದೀರಿ ಅದು ಸಾಧನೆಗೆ ಸಂದ ಗೌರವವಾಗಿದೆ, ಮುಂಬೈ ನಗರದಲ್ಲಿ ಕರ್ನಾಟಕ ಸಂಘ ನಿರ್ಮಿಸುವ ಈ ಯೋಜನೆಗೆ ಯಾರೆಲ್ಲ ದೇಣಿಗೆ ನೀಡಲಿಲ್ಲವೇ ಅವರೆಲ್ಲರೂ ನೀಡುವಂತಾಗಲಿ, ಅವರೆಲ್ಲರಿಗೂ ದೇವರು ಕೊಡುವಂತ ಮನಸ್ಸು ಮಾಡಲಿ ಈ ಸಂಘದ ಭವ್ಯ ಭವನ ನಮ್ಮೆಲ್ಲರ ಭವನವಾಗಿದೆ, ಕರ್ನಾಟಕದ ಜನರ ಮತ್ತು ಕನ್ನಡಿಗರ ಅಭಿವೃದ್ಧಿಯ ಮುಖ್ಯ ಕೇಂದ್ರವಾಗಲಿ ಎಂದು




[illegible] ಭಂಡಾರಿ ಅವರನ್ನು ಗೌರವಿಸಿದಾಗ



[illegible] ಗಣೇಶ್ ಪ್ರಸಾದ್ ಅವರನ್ನು ಗೌರವಿಸಿದಾಗ



ನುಡಿದರು

ಮುಖ್ಯ ಅತಿಥಿ ಕರ್ನಾಟಕ ಮಲ್ಲ ಪತ್ರಿಕೆಯ ಸಂಪಾದಕ ಚಂದ್ರಶೇಖರ ಪಾಲೆತ್ತಾಡಿ ಮಾತನಾಡುತ್ತಾ ಮುಂಬೈಯ ಪ್ರತಿನಿತ್ಯ ಸಂಸ್ಥೆಯಾಗಿರುವ ಕರ್ನಾಟಕ ಸಂಘ 90ರ ಸಂಭ್ರಮದಲ್ಲಿ  ಭವ್ಯ ಭವನದ ಯೋಜನೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ, ಈ ಯೋಜನೆ ಪೂರ್ಣಗೊಂಡಾಗ ಮುಂಬೈಯ ಕನ್ನಡಿಗರನ್ನು ಬಲಿಷ್ಟಗೊಳ್ಳುವಲ್ಲಿ ಸಹಕಾರಿ ಆಗಬಹುದು, ಸಂಘದ ಹಿಂದಿನ ಭವ್ಯ ಭವನದ ಮೂಲಕ ಕನ್ನಡಿಗರು ಅಲ್ಲಿ ಒಗ್ಗೂಡಿಸಿದ್ದು, ಅಂತಹ ಒಗ್ಗಟ್ಟಿನ ಭವ್ಯ ಕಾರ್ಯಕ್ರಮಗಳು ಮತ್ತೊಮ್ಮೆ ಈ ನಗರದಲ್ಲಿ ಆಗಬೇಕಾದರೆ ಕರ್ನಾಟಕ ಸಂಘದ ಬಹು ಕೋಟಿ ವೆಚ್ಚದ ನಿರ್ಮಾಣವಾಗಬೇಕಾಗಿದೆ, ಇದಕ್ಕೆ ಕರ್ನಾಟಕ ಸರಕಾರ ಅನುದಾನ ದೊಡ್ಡ ಮಟ್ಟದ್ದು ನೀಡಬೇಕು ಏಕೆಂದರೆ ಕರ್ನಾಟಕದಿಂದ ಬರುವ ಎಲ್ಲರನ್ನು ಕೂಡ ನಾವು ಬಹಳ ಅಭಿಮಾನ ಗೌರವದಿಂದ ಗೌರವಿಸಿ ಅಭಿನಂದಿಸುವ ಪರಿಪಾಠವನ್ನು ಬೆಳೆಸಿಕೊಂಡಿದ್ದೇವೆ, ಹೊರನಾಡಿನವರು ನಮ್ಮ ಕನ್ನಡ ನಾಡಿನ ಬಗ್ಗೆ ಬಾಳ ಅಭಿಮಾನವಿಟ್ಟವರು ಮುಂಬೈಯ ಕನ್ನಡಿಗರಿಗೆ ಕನ್ನಡದ ಮೇಲೆ ಬಹಳಷ್ಟು ಅಭಿಮಾನದಿಂದ ಇಲ್ಲಿ ಕನ್ನಡದ ಸಂಘ ಸಂಸ್ಥೆಗಳು ಕನ್ನಡದ ಉಳಿವಿಗಾಗಿ ಅವಿರತ ಸೇವೆ ಮಾಡುತ್ತಿದೆ ಎಂದು ನುಡಿದರು,

ಅತಿಥಿ ಬಾಲಕೃಷ್ಣ ಭಂಡಾರಿ ಮಾತನಾಡುತ್ತಾ ತುಂಬಾ ಸೊಗಸಾದ ಮತ್ತು ಕನ್ನಡಿಗರ ಕನಸಾದ ಈ ಭವ್ಯ ಭವನದ ಉದ್ಘಾಟನೆಗೆ ದೇಶದ ಪ್ರಧಾನ ಮಂತ್ರಿಗಳು ಬರುವಂತಾಗಲಿ ಎಂದು ಶುಭ ಹಾರೈಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಸಂಘದ ಅಧ್ಯಕ್ಷ ಎಂ. ಎಂ. ಕೋರಿಯವರು ಮಾತನಾಡುತ್ತಾ ನಮ್ಮ ಯೋಜನೆ ರೂಪಗೊಳ್ಳುತ್ತಿದ್ದಂತೆ ಕನ್ನಡಿಗರು ವಿವಿಧ ರೀತಿಯಲ್ಲಿ ಸಹಕಾರವನ್ನು ನೀಡುತ್ತಾ ಬಂದಿದ್ದಾರೆ ಇಂದು ಸಮಾರಂಭದಲ್ಲಿ ಪಾಲ್ಗೊಂಡಿದ್ದ ಮಹನೀಯರೆಲ್ಲರೂ ನಮ್ಮ ಯೋಜನೆಗೆ ಸಹಕಾರ ನೀಡುತ್ತೇನೆ ಎಂಬ ಭರವಸೆಗಳನ್ನು ನೀಡಿದ್ದಾರೆ. ‘ಸಂಘದ ಬಹುಕೋಟಿ ವೆಚ್ಚದ ಭವನ ನಿರ್ಮಾಣ ಕಾರ್ಯವೇಗದಲ್ಲಿ ನಡೆಯುತ್ತಿದ್ದು ಇದು ಲೋಕಾರ್ಪಣೆಯಾಗಲು ಇನ್ನು ಬಹಳಷ್ಟು ದೇಣಿಗೆಗಳು ಹರಿದು ಬರಬೇಕು. ಅದಕ್ಕೆ ಕನ್ನಡಿಗರಾದ ತಾವೆಲ್ಲರೂ ತುಂಬು ಹೃದಯದಿಂದ ಸಹಕಾರವನ್ನು ನೀಡಬೇಕು ಎಂದು ವಿನಂತಿಸಿದರು.

ಸಂಜೆ ಸಮಾರೋಪ ಸಮಾರಂಭದಲ್ಲಿ ಗೌರವ ಅತಿಥಿಗಳಾಗಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಸಿ. ಸೋಮಶೇಖರ್, ಎ. ಎಸ್. ಪ್ರವೀಣ್ ಶೆಟ್ಟಿ, ದುಬೈ (ಫಾರ್ಚೂನ್ ಗ್ರೂಫ್ ಆಫ್ ಹೋಟೆಲ್ಸ್), ಪ್ರಕಾಶ್ ಮತ್ತೀಹಳ್ಳಿ (ಕಾರ್ಯದರ್ಶಿಗಳು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸರಕಾರ), ಚಂದ್ರಶೇಖರ ಪಾಲೆತ್ತಾಡಿ (ಸಂಪಾದಕರು ಕರ್ನಾಟಕ ಮಲ್ಲ ದಿನ ಪತ್ರಿಕೆ), ಕೆ. ಸಿ. ಶೆಟ್ಟಿ (ಕಾರ್ಯಾಧ್ಯಕ್ಷರು



ಮತ್ತು ಆಡಳಿತ ನಿರ್ದೇಶಕರು ಲಿಲ್ಯುಮೆನ್ಸ್ ಗ್ರೂಪ್ ಆಫ್ ಇಂಡಸ್ಟ್ರೀಸ್) ಸದಾಶಿವ ಭಂಡಾರಿ ಸಕಲೇಶಪುರ (ಅಧ್ಯಕ್ಷರು, ಭಂಡಾರಿ ಮಹಾ ಮಂಡಲ), ಬಾಲಕೃಷ್ಣ ಭಂಡಾರಿ ಕುಂಬ್ಳೆ (ಆಡಳಿತ ನಿರ್ದೇಶಕರು ಭಗೀರಥ ಕೆಮಿಕಲ್ಸ್) ಸಂತೋಷ್ ಶೆಟ್ಟಿ, ಇನ್ನ ಕುರ್ಕಿಲಬೆಟ್ಟು (ಅಧ್ಯಕ್ಷರು, ಬಂಟರ ಸಂಘ ಪುಣೆ) ನಿಲೇಶ್ ಶರದ್ ಪರೇಖ್ (ನಿರ್ದೇಶಕರು, ಶ್ರೀಜಿ ವುಡ್ ಕ್ರಾಫ್ಟ್ ಪ್ರೈವೆಟ್ ಲಿ.) ಉಪಸ್ಥಿತರಿದ್ದರು. ಕರ್ನಾಟಕ ಸಂಘದ ಗೌರವ ಕಾರ್ಯದರ್ಶಿ ವಿಶ್ವೇಶ್ವರ ಎನ್. ಮೇಟಿ, ಗೌ ಕೋಶಾಧಿಕಾರಿ ಓಂದಾಸ್ ಕಣ್ಣಂಗಾರ್ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು,

ಆಧುನಿಕ ತಂತ್ರ ಜ್ಞಾನದ ಮೂಲಕ ಹೊಸ ವಿನ್ಯಾಸದಲ್ಲಿ ಅದ್ದೂರಿಯಾಗಿ ನಡೆದ ಕಾರ್ಯಕ್ರಮದ ನಿರೂಪಣೆ ಮತ್ತು ಕಂಠದಾನ ಕಲಾವಿದರಾಗಿ ಅಹಲ್ಯಾ ಬಲ್ಲಾಳ್, ಅವಿನಾಶ್ ಕಾಮತ್, ಸುರೇಂದ್ರ ಕುಮಾರ್ ಮಾರ್ನಾಡ್, ನಳಿನಾ ಪ್ರಸಾದ್, ಮಾಲತಿ ಚಂದ್ರಕಾಂತ್ ಸಹಕರಿಸಿದ್ದರು. ತಾಂತ್ರಿಕ ವಿಭಾಗವನ್ನು ಲತೇಶ್ ಪೂಜಾರಿ ನಿರ್ವಹಿಸಿದರು.

ಕಾರ್ಯಕ್ರಮವು ಸಂಘದ ಮಾಜಿ ಉಪಾಧ್ಯಕ್ಷ ಡಾ. ಭರತ್ ಕುಮಾರ್ ಪೊಲಿಪು ಮತ್ತು ಸಂಗೀತ ನಿರ್ದೇಶಕ ಪದ್ಮನಾಭ ಸಸಿಹಿತ್ಲು ಅವರ ಸಮರ್ಥ ಸಂಯೋಜನೆಯಲ್ಲಿ ಹಾಗೂ ಸಮಿತಿ ಸದಸ್ಯರ ಸಹಕಾರದಿಂದ ಯಶಸ್ವಿಯಾಗಿ ಜರಗಿತು. ಹೆಸರಾಂತ ಸಂಘಟಕ ಸಂಘದ ಕೋಶಾಧಿಕಾರಿ, ಓಂದಾಸ್ ಕಣ್ಣಂಗಾರ್ ಅದ್ಭುತವಾಗಿ ಕಾರ್ಯಕ್ರಮವನ್ನು ಸಂಘಟಿಸಿದ್ದರು. ಸ್ಪರ್ಧೆಯ ತೀರ್ಪುಗಾರರಾಗಿ ಶ್ರೀಮತಿ ಶೈಲಜಾ ದೇಸಾಯಿ, ಶ್ರೀಮತಿ ಸಹನಾ ಭಾರದ್ವಾಜ್, ವ್ರಜೇಶ್ ಆನಂದ್ ಭಾಗವಹಿಸಿದರು. ಇದೇ ಸಂದರ್ಭದಲ್ಲಿ ಕನ್ನಡನಾಡಿನ ಖ್ಯಾತ ಸಂಘಟಕರು, ಕೇಂದ್ರ ಸಂಗೀತ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಶ್ರೀನಿವಾಸ ಜಿ. ಕಪ್ಪಣ್ಣ ದಂಪತಿ ಅವರನ್ನು ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದಂಗವಾಗಿ ಮುಂಬಯಿ ಕನ್ನಡಿಗರ ಕನ್ನಡ ಸಂಘ ಸಂಸ್ಥೆಗಳಿಗಾಗಿ ಸಮೂಹ ನೃತ್ಯ ಸ್ಪರ್ಧೆ ಆಯೋಜಿಸುತ್ತಿದ್ದು 15 ತಂಡಗಳು ಪಾಲ್ಗೊಂಡಿದ್ದು, ಅಂತಾರಾಷ್ಟ್ರೀಯ ಖ್ಯಾತಿಯ ಗಾಯಕಿ ಸವಿತಾ ಗಣೇಶ್ ಪ್ರಸಾದ್ ಮತ್ತು ತಂಡದವರಿಂದ 'ಸವಿತಕ್ಕನ ಅಳ್ಳೀ ಬ್ಯಾಂಡ್' – ಜಾನಪದ ಗಾಯನ – ವಾದನ ವೈವಿಧ್ಯ ಕಾರ್ಯಕ್ರಮ ಕಿಕ್ಕಿರಿದ ಪ್ರೇಕ್ಷಕರ ಅಪಾರ ಮೆಚ್ಚುಗೆಗೆ ಪಾತ್ರವಾಯಿತು".

# ಭಾಷೆ, ಸಂಸ್ಕೃತಿಯ ಶ್ರೀಮಂತಿಕೆಯನ್ನು ಅನಾವರಣಗೊಳಿಸಿದ ಅದ್ಭುತ ಕಾರ್ಯಕ್ರಮ : ಮಂಗಲಪ್ರಭಾ ತ್ಲೋಧಾ

ಕರ್ನಾಟಕದ ಜನರು ಹೃದಯ ವೈಶಾಲ್ಯತೆಯನ್ನು ಹೊಂದಿದವರಾಗಿದ್ದು ಕಲೆ, ಸಂಸ್ಕೃತಿಯ ಬಗ್ಗೆ ಅಪಾರ ಪ್ರೀತಿ ಅಭಿಮಾನವನ್ನು ಇಟ್ಟುಕೊಂಡಿದ್ದಾರೆ. ಅವರು ಒಳ್ಳೆಯ ಸ್ವಭಾವದವರಾಗಿದ್ದು, ಸರಳ ವ್ಯಕ್ತಿತ್ವದ ಅವರ ಬಗ್ಗೆ ಯಾವಾಗಲೂ ಭರವಸೆಯನ್ನು ಇಡಬಹುದು. ಕರ್ನಾಟಕದ ಜನರ ಬಗ್ಗೆ ನನಗೆ ತುಂಬಾ ಗೌರವ ಇದೆ. ಉಪಮುಖ್ಯ ಮಂತ್ರಿದೇವ ದೇವೇಂದ್ರ ಫಡ್ನವೀಸ್ ವರ ಸಲಹೆ ಮೇರೆಗೆ ನಾನು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ನನಗೆ ನಿಜವಾಗಿಯೂ ಸಂತೋಷ ಅಗಿದೆ ಎಂದು ಮಹಾರಾಷ್ಟ ಸರಕಾರದ ಕೌಶಲಾಭಿವೃದ್ಧಿ, ಪ್ರವಾಸೋದ್ಯಮ, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯ ಸಚಿವ ಮಂಗಲಪ್ರಭಾ ತ್ಲೋಧಾ ಹೇಳಿದರು.



ಸಚಿವ ಮಂಗಲಪ್ರಭಾತ್ ಲೋಧಾ ಅವರನ್ನು ಗೌರವಿಸಿದಾಗ

ಮುಲುಂಡ್ ಪಶ್ಚಿಮದ ಮಹಾಕವಿ ಕಾಳಿದಾಸ ಸಭಾಗೃಹದಲ್ಲಿ ಎಪ್ರಿಲ್ 8 ಶನಿವಾರದಂದು ಜರಗಿದ ಕರ್ನಾಟಕ ಸಂಘದ 90ರ ಸಂಸ್ಕೃತಿ ಸಂಭ್ರಮದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡಿದರು.




ನೃತ್ಯ ಸ್ಪರ್ಧೆಯಲ್ಲಿ ಜಗದಂಬಾ ಮಂದಿರ ಡೊಂಬಿವಲಿ ಪ್ರಥಮ





ಭಾಷೆ, ಸಂಸ್ಕೃತಿಯ ಶ್ರೀಮಂತಿಕೆಯನ್ನು ಅನಾವರಣಗೊಳಿಸಿದ ಇಂದಿನ ಅದ್ಭುತ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ತುಂಬಾ ಖುಷಿ ಕೊಟ್ಟಿದೆ. ಇದರ ಯಶಸ್ವಿಗೆ ಶ್ರಮಿಸಿದ ಪ್ರತಿಯೊಬ್ಬರನ್ನೂ ಅಭಿನಂದಿಸುತ್ತೇನೆ. ಕಳೆದ 90 ವರ್ಷಗಳಿಂದ ಕರ್ನಾಟಕ ಸಂಘವು ಮಾಡಿರುವ ಒಳ್ಳೆಯ ಕೆಲಸಗಳ ಬಗ್ಗೆ ತಿಳಿದುರೋಮಾಂಚನಗೊಂಡಿದ್ದೇನೆ. ಬಾಷೆ, ಕಲೆ, ಸಂಸ್ಕೃತಿಯ ಬಗ್ಗೆ ಅಪಾರಕಾಳಜಿ ಇಟ್ಟು ಕೊಂಡು ಕರ್ನಾಟಕ ಸಂಘವು ಮಾಡುತ್ತಿರುವ ಕಾರ್ಯವು ಶ್ಲಾಘನೀಯವಾಗಿದ್ದು ಇತರರಿಗೆ ಮಾದರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ ಅವರು ಇಂತಹ ಮೇರು ಸಂಸ್ಥೆಗೆ ಸಹಕಾರದ ಭರವಸೆಯನ್ನು ನೀಡಿದರು.

ಅವರನ್ನು ಸಂಘದ ಅಧ್ಯಕ್ಷರಾದ ಎಂ. ಎಂ. ಕೋರಿ, ಮಾಜಿ ಉಪಾಧ್ಯಕ್ಷರಾದ ಡಾ. ಎಸ್. ಕೆ. ಭವಾನಿ, ಉಪಮುಖ್ಯ ಮಂತ್ರಿದೇವ ದೇವೇಂದ್ರ ಫಡ್ನವೀಸ್‌ವರ ಸಲಹೆ ಮೇರೆಗೆ ನಾನು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ನನಗೆ ನಿಜವಾಗಿಯೂ ಸಂತೋಷ ಅಗಿದೆ. ಎಂದು ಮಹಾರಾಷ್ಟ ಸರಕಾರದ ಕೌಶಲಾಭಿವೃದ್ಧಿ, ಪ್ರವಾಸೋದ್ಯಮ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವ ಮಂಗಲಪ್ರಭಾ ತ್ಲೋಧಾ ಹೇಳಿದರು.

ಮುಲುಂಡ್ ಪಶ್ಚಿಮದ ಮಹಾಕವಿಕಾಳಿದಾಸ ಸಭಾಗೃಹದಲ್ಲಿ ಎಪ್ರಿಲ್ 8, ಶನಿವಾರದಂದು ಜರಗಿದ ಕರ್ನಾಟಕ ಸಂಘದ 90ರ ಸಂಸ್ಕೃತಿ ಸಂಭ್ರಮದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಭಾಷೆ, ಸಂಸ್ಕೃತಿಯ ಶ್ರೀಮಂತಿಕೆಯನ್ನು ಅನಾವರಣಗೊಳಿಸಿದ ಇಂದಿನ ಅದ್ಭುತ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ತುಂಬಾ ಖುಷಿ ಕೊಟ್ಟಿದೆ. ಇದರ ಯಶಸ್ವಿಗೆ ಶ್ರಮಿಸಿದ ಪ್ರತಿಯೊಬ್ಬರನ್ನೂ ಅಭಿನಂದಿಸುತ್ತೇನೆ. ಕಳೆದ 90 ವರ್ಷಗಳಿಂದ ಕರ್ನಾಟಕ ಸಂಘವು ಮಾಡಿರುವ ಒಳ್ಳೆಯ ಕೆಲಸಗಳ ಬಗ್ಗೆ ತಿಳಿದು ರೋಮಾಂಚನಗೊಂಡಿದ್ದೇನೆ. ಬಾಷೆ, ಕಲೆ, ಸಂಸ್ಕೃತಿಯ ಬಗ್ಗೆ ಅಪಾರ ಕಾಳಜಿ ಇಟ್ಟುಕೊಂಡು ಕರ್ನಾಟಕ ಸಂಘವು ಮಾಡುತ್ತಿರುವ ಕಾರ್ಯವು ಶ್ಲಾಘನೀಯವಾಗಿದ್ದು ಇತರರಿಗೆ ಮಾದರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ ಅವರು ಇಂತಹ ಮೇರು ಸಂಸ್ಥೆಗೆ ಸಹಕಾರದ ಭರವಸೆಯನ್ನು ನೀಡಿದರು.

ಅವರನ್ನು ಸಂಘದ ಅಧ್ಯಕ್ಷರಾದ ಎಂ. ಎಂ. ಕೋರಿ, ಮಾಜಿ ಉಪಾಧ್ಯಕ್ಷರಾದ ಡಾ. ಎಸ್. ಕೆ. ಭವಾನಿ, ಉದ್ಯಮಿ, ಗೌ. ಅತಿಥಿ ಅಶೋಕ್ ಭಂಡಾರಿ, ಗೌ. ಕಾರ್ಯದರ್ಶಿ ವಿಶ್ವೇಶ್ವರ ಮೇಟಿ, ಗೌ. ಕೋಶಾಧಿಕಾರಿ ಓಂದಾಸ್ ಕಣ್ಣಂಗಾರ್ ಶಾಲು ಹೊದಿಸಿ, ನೆನಪಿನ ಕಾಣಿಕೆ, ಪುಸ್ತಕ ಗೌರವ ನೀಡಿ ಗೌರವಿಸಿದರು.

## ಕರ್ನಾಟಕ ಸಂಘ ಮುಂಬಯಿ, ಡಾ. ಸುನೀತಾ ಶೆಟ್ಟಿ ಸಾಹಿತ್ಯ ಪ್ರಶಸ್ತಿ ಪ್ರದಾನ ಮತ್ತು ಕೃತಿ ಬಿಡುಗಡೆ ಸಮಾರಂಭ

## ಸಾಹಿತ್ಯದ ಅಂತಿಮ ಸತ್ಯವೇ ಮನಸ್ಸಿಗೆ ಶಾಂತಿಯನ್ನು ನೀಡುವಂತದ್ದು : ಡಾ. ಭರತ್ ಕುಮಾರ್ ಪೊಲಿಪು

:ಒಂದು ಕೃತಿಯನ್ನು ಸಮಾಜ ವಿವಿಧ ದೃಷ್ಟಿಕೋನದಿಂದ ಗ್ರಹಿಸುವ ಮೂಲಕ ವಿವಿಧ ಜ್ಞಾನ ಶಾಖೆಗಳ ಮೂಲಕ ಅದರ ಅಧ್ಯಯನ ಮಾಡುವಂತಾಗಬೇಕು. ಆಗ ನಮ್ಮ ಅನುಭವಗಳ ಸಾಧ್ಯತೆಗಳು ತೆರೆದುಕೊಳ್ಳುತ್ತದೆ. ಒಬ್ಬ ಪ್ರಬುದ್ಧ ಲೇಖಕ ಬರೆದ ಕೃತಿಗಳು ನಮ್ಮ ಅನುಭವದ ನೆಲೆಯಲ್ಲಿ ಸಾಕಷ್ಟು ಅರ್ಥವಾಗದೇ ಇರುವಂತ ಸಾಧ್ಯತೆ ಇರುತ್ತದೆ. ಆವಾಗ ನಮ್ಮ ಅನುಭವ ವಿಚಾರವಾಗಿ ಪರಿವರ್ತನೆಗೊಂಡಾಗ ಅಂತ ಲೇಖನಗಳು



ಅರ್ಥವಾಗಲು ಸಾಧ್ಯವಾಗುತ್ತದೆ. ನಮ್ಮ ತಿಳುವಳಿಕೆಯ ಅನುಭವ ಪಡೆಯಲು ಸ್ವಂತ ನೆಲೆಯಲ್ಲಿ ಓದುವ ಹವ್ಯಾಸ ಬೆಳೆಯಬೇಕು. ಸಾಹಿತ್ಯದ ಅಂತಿಮ ಸತ್ಯವೇ ನಮ್ಮ ಮನಸ್ಸಿಗೆ ಶಾಂತಿಯನ್ನು ನೀಡುವಂತದ್ದು. ನಮ್ಮ ಅನುಭವ ಅರಿವು ಸಂವೇದನೆ ವಿಸ್ತರಿಸುವಂತ ಈ ಸಾಹಿತ್ಯದ ಮೂಲಕ ಅನೇಕ ಅನುಭವಗಳನ್ನು ಕಂಡುಕೊಳ್ಳಬಹುದು. ಎಂದು ಕರ್ನಾಟಕ ಸಂಘ ಮುಂಬಯಿ ಇದರ ಅಧ್ಯಕ್ಷರಾದ ಡಾ. ಭರತ್ ಕುಮಾರ್ ಪೊಲಿಪು ಅಭಿಪ್ರಾಯಪಟ್ಟರು.



ಡಿ. 30ರಂದು ಮಾಟುಂಗ ಪೂರ್ವದ ಮೈಸೂರು ಅಸೋಸಿಯೇಷನ್‌ನಲ್ಲಿ ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ 'ಕರ್ನಾಟಕ ಸಂಘ ಮುಂಬಯಿ ಆಯೋಜಿಸಿದ ಡಾ. ಸುನೀತಾ ಶೆಟ್ಟಿ ಸಾಹಿತ್ಯ ಪ್ರಶಸ್ತಿ ಪ್ರದಾನ ಮತ್ತು ಡಾ. ಈಶ್ವರ್ ಅಲೆವೂರು, ಮನೋಹರ್ ತೋನ್ಸೆ ಅವರ ಕೃತಿ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಾಹಿತ್ಯ ಎಷ್ಟು ಸೃಜನ ಶೀಲವೋ ಸಾಂಸ್ಕೃತಿಕ ಅಧ್ಯಯನಗಳು ಕೂಡ ಅಷ್ಟೇ ಮುಖ್ಯವಾದುದು. ಕಾರ್ಯಕ್ರಮಗಳ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ನಮಗೆ ಸಂಬಂಧಪಟ್ಟದಲ್ಲ ಎಂಬ ಭಾವನೆಯಿಂದ ಹೊರ ಬರಲು ಪುಸ್ತಕ ಬಿಡುಗಡೆಯ ಕಾರ್ಯಕ್ರಮದ ಪ್ರಾರಂಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಅಳವಡಿಸಲಾಯಿತು. ಅದು ನಾವು ಕಲಾವಿದರಿಗೆ ಕೊಡುವ ಗೌರವ ಎಂದು ಹೇಳಿದ ಪೊಲಿಪುರವರು ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಾಹಿತ್ಯ ಪ್ರೇಮಿಗಳಿಗೆ ಅಭಿನಂದನೆ ಸಲ್ಲಿಸಿದರು.

ಲೇಖಕ ಮನೋಹರ್ ತೋನ್ಸೆಯವರ ಸಾಹಿತ್ಯ ಲೇಖನ ಸಂಗ್ರಹ 'ಬಹುಮುಖಿ' ಮತ್ತು ಲೇಖಕ ಡಾ. ಈಶ್ವರ ಅಲೆವೂರುರವರ ವಿಮರ್ಶಲೇಖನ 'ಒಲವು ನಿಲುವು' ಕೃತಿಗಳನ್ನು ಬಿಡುಗಡೆಗೊಳಿಸಿ ಪುಸ್ತಕ ಕೃತಿಕಾರರಿಗೆ ಹಾಗೂ ಪ್ರಶಸ್ತಿ ಸ್ವೀಕರಿಸುವ ಅಭಿನಂದನೆ ಸಲ್ಲಿಸಿ ಮಾತನಾಡಿದ ಸಾಹಿತಿ ವಿಜ್ಞಾನಿ ಡಾ. ವ್ಯಾಸರಾವ್ ನಿಂಜೂರು ಪುಸ್ತಕ ಬಿಡುಗಡೆಗೆಯ ಸೀಮಿತ ಕಾರ್ಯಕ್ರಮದಲ್ಲಿ ಇಷ್ಟೊಂದು ಸಾಹಿತ್ಯ ಪ್ರಿಯರು ಬಂದಿರುವುದು ನೋಡಿದರೆ ಮಹಾನಗರದಲ್ಲಿ ಸಾಹಿತ್ಯ ಪ್ರೇಮಕ್ಕೆ ಈ ಕಾರ್ಯಕ್ರಮ ಸಾಕ್ಷಿಯಾಗಿದೆ. ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ಸಾಂಸ್ಕೃತಿಕವಾಗಿ ಅನಾವರಣಗೊಳಿಸುವ ಮೂಲಕ ಕರ್ನಾಟಕ ಸಂಘದ ಒಂದು ವಿನೂತನ ಅಧ್ಯಾಯವೆಂದು ಹೇಳಬೇಕು. ಜೊತೆಗೆ ಸದಾ ಬಂಧುತ್ವ ಪ್ರೀತಿಗೆ ಮಹತ್ವ ನೀಡುವಂತಹ ಮುಂಬೈಯ ಹಿರಿಯ ಸಾಹಿತಿ ಡಾ. ಸುನೀತಾ ಶೆಟ್ಟಿ ಅವರ ಹೆಸರಿನ 'ಪ್ರಶಸ್ತಿ ಕರ್ನಾಟಕ ಸಂಘದ 'ಒಂದು ಮಹತ್ವದ ಕಾರ್ಯಕ್ರಮವಾಗಿದೆ. ಇದರಲ್ಲಿ ಭಾಗವಹಿಸುವ ಅವಕಾಶ ದೊರೆತಿದ್ದು ಸಂತೋಷ ತಂದಿದೆ ಎಂದು ಹೇಳಿ ಕೃತಿಕಾರರನ್ನು ಅಭಿನಂದಿಸಿದರು.

ಡಾ. ಸುನೀತಾ ಶೆಟ್ಟಿ ಮಾತನಾಡಿ ಮುಂಬೈ ಕನ್ನಡಿಗರು ಸದಾ ಸಾಹಿತ್ಯ ಪ್ರೇಮಿಗಳು. ಕರ್ನಾಟಕ ಸಂಘದ ಇಂದು ಪ್ರಶಸ್ತಿಗೆ ಭಾಜನರಾದ ವ್ಯಕ್ತಿ ಡಾ. ವಿಶ್ವನಾಥ ಕಾರ್ನಾಡ್‌ರು ಸ್ನಾತಕೋತ್ತರ ಪದವಿಯಲ್ಲಿ ಸಹಪಾಟಿಯಾಗಿದ್ದು ಅಂದಿನಿಂದ ನಮ್ಮ ಬಂಧುತ್ವ ಉಳಿದಿದೆ. ಇಂದಿನ ಎರಡು ಕೃತಿಕಾರರು ಸೃಜನಶೀಲ ಸಂವೇದನಾಶೀಲ ವ್ಯಕ್ತಿಗಳು. ಬರಹಗಾರ ಮನೋಹರ ತೋನ್ಸೆ ಅರಬರ ನಾಡಿನಲ್ಲಿ ಕನ್ನಡ ಮಿಡಿತ ಹೊಂದಿರುವವರು ಮತ್ತೋರ್ವರು ಮುಂಬೈ ಕನ್ನಡ ಸಾರಸ್ವತ ಲೋಕದಲ್ಲಿ ಉತ್ತಮ ಬರಹಗಾರರಾಗಿ ಕಾಣಿಸಿಕೊಂಡವರು. ಕೌಟುಂಬಿಕ ಹಾಗೂ ಸಾಮಾಜಿಕ ನೆಲೆಯಲ್ಲಿ ಸಹಬಾಳ್ವೆಯಿಂದ ಬದುಕಬೇಕೆಂದು, ಎಲ್ಲವನ್ನು ಕಲಿಸಿಕೊಡುವುದು ಸಾಹಿತ್ಯ ಮಾತ್ರ. ವಿಶಿಷ್ಟ ರೀತಿಯಲ್ಲಿ ಪುಸ್ತಕ ಬಿಡುಗಡೆ ಕಾರ್ಯಕ್ರಮ ಹಾಗೂ ಪ್ರಶಸ್ತಿ ಪ್ರಧಾನ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಕಾಲಾನು ಕಾಲಕ್ಕೆ ಪ್ರಶಸ್ತಿ ನೀಡುವುದನ್ನು ಪಾಲಿಸಿಕೊಂಡು ಬಂದ ಕರ್ನಾಟಕದ ಸಂಘಕ್ಕೆ ಅಭಿನಂದನೆ ಸಲ್ಲಿಸಿದರು.

ಪ್ರಶಸ್ತಿ ಸ್ವೀಕರಿಸಿದ ಸಾಹಿತಿ ಚಿಂತಕ ವಿಶ್ವನಾಥ್ ಕಾರ್ನಾಡ್ ಪ್ರಶಸ್ತಿ ಬಗ್ಗೆ ಮಾತನಾಡಿ ನನ್ನ ಸಾಹಿತ್ಯ ಕ್ಷೇತ್ರ ಪ್ರಚಾರಕ್ಕೆ ಇಡದೆ ನನ್ನ ವೃತ್ತಿ ಜೀವನದಲ್ಲಿ ನಾನು ಸಾಹಿತ್ಯ ಬರವಣಿಗೆಗೆ ಮಹತ್ವ ನೀಡುವ ಮೂಲಕ ಉದ್ಯೋಗ ಸಾಹಿತ್ಯ ಎರಡನ್ನು ಸಮಾನ ದೃಷ್ಟಿಕೋನದಿಂದ ಸ್ವೀಕರಿಸಿದವನು. ನಾನು ಇಂದಿನ ಪ್ರಶಸ್ತಿ ಅದರಲ್ಲೂ ನನ್ನ ಹೆಮ್ಮೆಯ ತರಗತಿಯ ಸಹಪಾಠಿ ಹೆಸರಿನಲ್ಲಿ ದೊರೆತ ಪ್ರಶಸ್ತಿ ನನಗೆ ಅತೀವ ಸಂತೃಪ್ತಿ ನೀಡಿದೆ. ಇದು ಡಾ. ಸುನೀತಾ ಶೆಟ್ಟಿಯವರ ಆಶೀರ್ವಾದ. ಪ್ರಶಸ್ತಿ ಎಂಬುದು ಸಂಚಲನ ಮೂಡಿಸುವ ಮತು ್ತಬರಹಗಾರಿಗೆ ನೀಡುವ ಪ್ರೋತ್ಸಾಹ ಎಂದು ಹೇಳಿದರು.

ಕೃತಿ ಲೇಖಕರನ್ನು ಪರಿಚಯಿಸಿ ಮಾತನಾಡಿದ ಅಕ್ಷಯ ಪತ್ರಿಕೆಯ ಸಂಪಾದಕ ಹರೀಶ್ ಹೆಜ್ಮಾಡಿಯವರು,

ಸಾಹಿತ್ಯ ಸಂಸ್ಕೃತಿ ಸಮೀಕ್ಷೆಯು ಸಂಸ್ಕೃತಿ ಸೊಬಗು ಮತ್ತು ಕೊಲ್ಲಿಯಲ್ಲಿ ಕನ್ನಡದ ಕಲರವ. 80ರ ದಶಕದಲ್ಲಿ ಕೊಲ್ಲಿ ರಾಷ್ಟ್ರದ ಕನ್ನಡದ 'ಕಟ್ಟಾಳಾಗಿ ಅಬುದಾಬಿ, ಕನ್ನಡ ಸಂಘದ ಸ್ಥಾಪಕ ಅಧ್ಯಕ್ಷರಾಗಿ ಸೃಜನಶೀಲತೆಯ ತುಂಬಿದ ಅವರ ಮಾತುಗಳು ಆಲೋಚನೆಗಳು ಅವರ ಕೃತಿಯು ಪರಿಚಯಿಸುತ್ತಿದೆ. ಮತ್ತೋರ್ವ ಬರಹಗಾರ ಈಶ್ವರ ಕನ್ನಡ ಪತ್ರಿಕೆಯ ರಂಗದಲ್ಲಿ ಅವರದು ಮೊಣಚಾಗಿ ನಿಖರ ಬರೆಯುವವರು. ಅಪರೂಪದ ವ್ಯಕ್ತಿತ್ವ .ಒಳ್ಳೆಯ ಸಂಪಾದಕರಾದ ಕನ್ನಡ ಸಾರಸ್ವತ ಲೋಕದಲ್ಲಿ ಎಲ್ಲಾ ಕೃತಿಗಳು ನಾಟಕ ಕಥೆ ಬರಹಗಳು ವಿಮರ್ಶೆಗಳ ಮಾಡಿದವರು ಯಾವುದೇ ವಿವಾದಕ್ಕೆ ಒಳಗಾಗದ ಬರಹಗಾರರಾಗಿದ್ದು ಡಾಕ್ಟರೇಟ್ ಪದವೀಧರರ ಮುತ್ಸದ್ಧಿ ಸಾಹಿತಿ ಪ್ರೇಮಿಗಳ ನಡುವೆ ಈ ಕೃತಿ ಬಿಡುಗಡೆಗೊಳ್ಳುವ ಮೂಲಕ ಕೃತಿಕಾರರ ಹುರುಪು ಹುಮ್ಮಸ್ಸು ಹೆಚ್ಚಿಸಿದೆ. ಕನ್ನಡ ಸಾರಸ್ವತ ಲೋಕಕ್ಕೆ ಅವರ ಕೊಡುಗೆ ಇನ್ನಷ್ಟು ಸಿಗಲಿ ಎಂದು ಹಾರೈಸಿದರು.

ಸಾಹಿತಿ ಹಾಗೂ ಸದಸ್ಯರನ್ನು ಸ್ವಾಗತಿಸಿ ಮಾತನಾಡಿದ ಸಂಘದ ಗೌರವ ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್, ಕರ್ನಾಟಕ ಸಂಘವು ಸಾಹಿತ್ಯ ಕಾರ್ಯಕ್ರಮಗಳು ಕಡಿಮೆಯಾದರೂ ಸಂಧರ್ಬಾನುಸಾರವಾಗಿ ಆಯ್ದ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದ್ದು ಡಾ. ಸುನಿತಾ ಶೆಟ್ಟಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಸಂಘದ ಪ್ರತಿಷ್ಠಿತ ಕಾರ್ಯಕ್ರಮಗಳಲ್ಲಿ ಒಂದಾಗಿದ್ದು ಹಿರಿಯ ಸಾಹಿತಿಗಳಿಗೆ ಈ ಪ್ರಶಸ್ತಿ ನೀಡುವ ಕಾರ್ಯಕ್ರಮವಾಗಿದೆ.

ಕರ್ನಾಟಕ ಸಂಘದ ಕಲಾಭಾರತಿ ತಂಡದವರಿಂದ, ರಂಗ ಗೀತೆಗಳು ನಾಟಕದ ದೃಶ್ಯಗಳು ಸಾಂಸ್ಕೃತಿಕ ಕಾರ್ಯಕ್ರಮ ಜರಗಿತು. 'ಐಲೇಸಾ ತಂಡ'ದ ಸುರೇಂದ್ರ ಕುಮಾರ್ ಮಾರ್ನಾಡ್ ಕಾರ್ಯಕ್ರಮ ನಿರೂಪಿಸಿದರು.

## ಮುಂಬಯಿ ನೆಲದಲ್ಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯ ಕನ್ನಡಕ್ಕಾಗಿ ದೊಡ್ಡ ಕೊಡುಗೆಯಾಗಲಿದೆ : ಪ್ರಮೋದ್ ಮಧ್ವರಾಜ್

ಮುಂಬಯಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ, ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕರ್ನಾಟಕ ಸಂಘದ ಹೊಸ ಪರಿಕಲ್ಪನೆಯ ಬೃಹತ್ ಯೋಜನೆಯಾದ ನೂತನ ಸಾಂಸ್ಕೃತಿಕ ಸಮುಚ್ಚಯದ ಕಾಮಗಾರಿಯನ್ನು



ವೀಕ್ಷಿಸಲು, ಕಾರ್ಯ ನಿಮಿತ್ತ ಮುಂಬಯಿಗೆ ಆಗಮಿಸಿರುವ ಕರ್ನಾಟಕ ಸರಕಾರದ ಮಾಜಿ ಸಚಿವ, ರಾಜಕೀಯ ಧುರೀಣ, ಉತ್ತಮವಾಗ್ಮಿ, ವಿನಮ್ರನಾಯಕ ಹಾಗೂ ಭಾರತೀಯ ಜನತಾ ಪಕ್ಷದ ನಾಯಕರು ಆಗಿರುವ ಪ್ರಮೋದ್ ಮಧ್ವರಾಜ್‌ರವರು ದಿನಾಂಕ 06 ಜುಲೈ 2023ರಂದು ಸಂಜೆ ಭೇಟಿ ನೀಡಿದರು. ಕನ್ನಡ ಭಾಷೆ, ಕಲೆ ಸಂಸ್ಕೃತಿಯ ಬಗ್ಗೆ ಅಪಾರ ಅಭಿಮಾನವಿರುವ ಪ್ರಮೋದ್ ಮಧ್ವರಾಜ್ ಅವರು ಈಗಾಗಲೇ ಸಂಘದ ಕಟ್ಟಡಕ್ಕೆ ದೊಡ್ಡ ಮೊತ್ತವನ್ನು ದೇಣಿಗೆಯಾಗಿ ನೀಡಿದ್ದಾರೆ. ಅವರು ರಾಜಕೀಯ ರಂಗದಲ್ಲಿ ತನ್ನ ಕಾರ್ಯವೈಖರಿಯಿಂದ ಜನಮನಗೆದ್ದು ಬಹು ಬೇಗನೆ ಮುನ್ನಲೆಗೆ ಬಂದವರು. ರಾಜಕೀಯ ಕ್ಷೇತ್ರದಲ್ಲಿ ಸೋಲು ಗೆಲುವು ಎರಡನ್ನೂ ಸಮಚಿತ್ತದಿಂದ ಸ್ವೀಕರಿಸುವ ಅವರು ನಿಸ್ವಾರ್ಥ ರಾಜಕಾರಿಣಿ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ.

